DOP 15th of every month from Udupi HPO
ಬೆಲೆ ರೂ.2.50

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2010

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754


ಸಂಪುಟ-10 ಸಂಚಿಕೆ-4 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

ತುಳುನಾಡಿನಲ್ಲಿ ಬ್ರಾಹ್ಮಣ್ಯ
ಸಂಗ್ರಹ : ಸಿ.ಎಸ್.ರಾವ್.
ಪುಟ-6

“ಹರಿಕಥೆ ಅಪೇಕ್ಷಿತವೇ? ಅನಪೇಕ್ಷಿತವೇ?-೨
- ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್.
ಪುಟ-6

ಶ್ರೀಅಂಬಲಪಾಡಿ ಕೃಷ್ಣರಾಯರ ಮಾನವೀಯ ಮುಖ
-ವೈ. ಶಂಕರನಾರಾಯಣ ರಾವ್, ಪಡುಬಿದ್ರಿ
ಪುಟ-4

ಅಗಲಿದ ಹಿರಿಯ ಚೇತನ ಕೆ. ಎಲ್. ರಾಮಕೃಷ್ಣ ರಾವ್
- ಪ್ರಸನ್ನಲಕ್ಷ್ಮೀ ರಾವ್, ಮಣಿಪಾಲ
ಪುಟ-5




## ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ದುರ್ಗಾನಮಸ್ಕಾರ ಪೂಜೆ

ಕಿರುನವರಾತ್ರಿಯ ಶುಭ ಸಮಯದಲ್ಲಿ ತಾ.24-3-2010ನೇ ಬುಧವಾರ ರಾಮನವಮಿಯಂದು ಸಂಜೆ ಶ್ರೀಶಾರದಾ ದೇವಿಯ ಸನ್ನಿಧಿಯಲ್ಲಿ ಸಾಮೂಹಿಕ ಶ್ರೀದುರ್ಗಾನಮಸ್ಕಾರ ಪೂಜೆಯು ಸಂಪನ್ನಗೊಂಡಿತು.

ಅಪರಾಹ್ನ 3-00ರಿಂದ ಬ್ರಹ್ಮಶ್ರೀ ಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ದೀಪವಿಟ್ಟು ಮಂಡಲ ರಚಿಸಿ ಪೂಜೆಯ ಶುಭಾರಂಭವಾಯಿತು. ನಂತರ ನಮ್ಮ ಸಮಾಜದ ಸ್ವಾಧ್ಯಾಯ ತಂಡದವರಿಂದ ಸಪ್ತಶತೀ ಪಾರಾಯಣ ನಡೆಯಿತು. ಪೂಜಾ ಕರ್ತೃಗಳಾಗಿ ಸಂಘದ ಅಧ್ಯಕ್ಷ ಸಿ.ಎಸ್.ರಾವ್ ದಂಪತಿಗಳು ಸಹಕರಿಸಿದರು.

ಶ್ರೀಶಾರದಾ ದೇವಸ್ಥಾನದಲ್ಲಿ ಮಹಿಳೆಯರಿಂದ ಸಾಮೂಹಿಕ ಪ್ರಾರ್ಥನೆ, ಲಲಿತಾ ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರಗಳು ನಡೆದವು. ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ ಮುಗಿದು ರಾತ್ರಿ 8 ಗಂಟೆಗೆ ಮಹಾಪೂಜೆ ನೆರವೇರಿತು. ತೀರ್ಥ ಪ್ರಸಾದ ವಿತರಣೆ ಬಳಿಕ ಭೋಜನ ಪ್ರಸಾದ ನಡೆಯಿತು. ಈ ಸಂದರ್ಭದಲ್ಲಿ ಅಧಿಕ ಸಂಖ್ಯೆಯಲ್ಲಿ ಸಮಾಜ ಬಾಂಧವರು ಹಾಗೂ ಪರಿಸರದ ಭಕ್ತ ಬಾಂಧವರು ಪಾಲ್ಗೊಂಡು ಸೇವೆಯ ಧನ್ಯತೆಯನ್ನು ಪಡೆದರು.





ಮಂಗಳೂರು ಬೆಂಜನಪದವಿನ ಕೆನರಾ ಇಂಜಿನಿಯರಿಂಗ್ ಕಾಲೇಜಿನ E&E ವಿಭಾಗದ ಮುಖ್ಯಸ್ಥರಾದ ಪ್ರೊ। ಟಿ. ನಾರಾಯಣ ಶ್ಯಾನುಭಾಗ್ ಮತ್ತು ಶ್ರೀಮತಿ ಸವಿತಾ ಇವರು ದೊಡ್ಡಣಗುಡ್ಡೆ ರೈಲ್ವೇ ಬ್ರಿಡ್ಜ್ ಬಳಿ ನೂತನವಾಗಿ ನಿರ್ಮಿಸಿದ ಗೃಹ ‘ಶ್ರೀ ಸವಿತಾ’ದ ಪ್ರವೇಶೋತ್ಸವದ ಸಂದರ್ಭದಲ್ಲಿ ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ‘ಜಾಂಬವತಿ ಕಲ್ಯಾಣ’ ಯಕ್ಷಗಾನ ಬಯಲಾಟದ ಮೂರನೇ ಪ್ರಯೋಗವು ಯಶಸ್ವಿಯಾಗಿ ನಡೆಯಿತು.

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ),** ಕುಂಜಿಬೆಟ್ಟು, ಉಡುಪಿ – 2.



ನಮ್ಮ ಸಂಘದ ಆಶ್ರಯದಲ್ಲಿ

**ಶ್ರೀ ಶಂಕರಜಯಂತಿ ಕಾರ್ಯಕ್ರಮವು**

ತಾ.19-05-2010 ಬುಧವಾರದಂದು ನಡೆಯಲಿದೆ.

ಇದೇ ದಿನ **ಸಾಮೂಹಿಕ ಉಪನಯನ**

ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ.

ಸರ್ವರಿಗೂ ಆದರದ ಸ್ವಾಗತ :

– ಕಾರ್ಯದರ್ಶಿ

ಆಸಕ್ತ ಸಮಾಜ ಬಾಂಧವರು ಇದರಲ್ಲಿ ಪಾಲ್ಗೊಳ್ಳಲಿರುವ ವಟುಗಳ ವಿವರಗಳನ್ನು ತಾ.12-05-2010ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ಕೋರಲಾಗಿದೆ.

## ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವ ಆಚರಣೆ



ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವವು ತಾ.14-3-2010ರಂದು ಆದಿತ್ಯವಾರ ಜರಗಿತು.

ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಗಣಹೋಮ, ರುದ್ರಾಭಿಷೇಕ, ಶ್ರೀ ಚಕ್ರಪೂಜೆ ಇತ್ಯಾದಿ ಧಾರ್ಮಿಕ ವಿಧಿಗಳು ನಡೆದು ಸುಮಾರು 1ಗಂಟೆಗೆ ಮಹಾಪೂಜೆ, ಬ್ರಾಹ್ಮಣ ಸುಹಾಸಿನಿ ಆರಾಧನೆ ನಡೆದು ಪ್ರಸಾದ ವಿತರಿಸಲಾಯಿತು. ಅದೇ ದಿನ ಬೆಳಿಗ್ಗೆಯಿಂದಲೇ ಮಂಟಪದ ಆನಂದ ರಾವ್ ಹಾಲ್‌ನಲ್ಲಿ ಚಿತ್ರಕಲಾ ಪ್ರದರ್ಶನ, ಅಂಚೆ ಚೀಟಿ, ಅಂಚೆ ಪತ್ರ ಮತ್ತು ನಾಣ್ಯಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಕಲಾ ಪ್ರದರ್ಶನದಲ್ಲಿ ನಮ್ಮ ಸಮಾಜದ ಖ್ಯಾತ ಕಲಾವಿದರಾದ ವಸಂತರಾವ್ ಕೇದಗೆ, ರಾಜೇಂದ್ರ ಕೇದಗೆ ಶ್ರೀಮತಿ ರಾಜೇಶ್ವರಿ, ಶ್ರೀ ಕೆ. ದಿನಮಣಿ ಶಾಸ್ತ್ರಿ ಮಾಸ್ಟರ್ ಸೌರವ್ ಶಾಸ್ತ್ರಿ ಶ್ರೀಮತಿ ಮೀರಾ ರಾವ್, ಶ್ರೀಮತಿ ವಿದ್ಯಾರಾವ್, ಶ್ರೀಮತಿ ಸರೋಜಿನಿ ರಾವ್, ಶ್ರೀಮತಿ ಜಯಲಕ್ಷ್ಮೀ ಮುರಳೀಕೃಷ್ಣ, ಶ್ರೀಮತಿ ರಮ್ಯ ಲೋಕೇಶ್ ಕುಕ್ಕಿಕಟ್ಟೆ ಇವರುಗಳ ವಿವಿಧ ಆಕರ್ಷಣೀಯ ಕಲಾಪ್ರದರ್ಶನಗಳು, ಛಾಯಾ ಚಿತ್ರಗಳು, ಜಲವರ್ಣ ಚಿತ್ರಗಳು ಮತ್ತು ಮಹಿಳೆಯರು ಬಿಡುವಿನ ಸಮಯದಲ್ಲಿ ತಯಾರಿಸಿದ ಮೆಟಲ್ ಎಂಬೋಸಿಂಗ್, ಗ್ಲಾಸ್ ಪೈಂಟಿಂಗ್, ಗೊಂಬೆ, ಹೂದಾನಿ ಇತ್ಯಾದಿ ಕರಕುಶಲ ವಸ್ತುಗಳು ಕಲಾಸಕ್ತರ ಮೆಚ್ಚುಗೆ ಪಡೆದವು.

ಇದೇ ಸಂದರ್ಭದಲ್ಲಿ ಎಂ.ಕೆ.ಕೃಷ್ಣಯ್ಯರವರ ಅಂಚೆ ಚೀಟಿ ಪ್ರದರ್ಶನ, ಶ್ರೀ ರಾಯಿ ರಾಜಕುಮಾರ್ ಅವರ ಅಂಚೆ ಪತ್ರಗಳ ಪ್ರದರ್ಶನ ಮತ್ತು ಶ್ರೀ ಜಯಪ್ರಕಾಶರಾವ್ ಅವರ ಅಪೂರ್ವ ನಾಣ್ಯ ಸಂಗ್ರಹ ವೀಕ್ಷಕರನ್ನು ಬೆರಗುಗೊಳಿಸಿತು. ಬೆಳಿಗ್ಗೆ ನಡೆದ ಸಭೆಯ ಅಧ್ಯಕ್ಷತೆಯನ್ನು ವೈ.ಎಸ್.ಶಂಕರ ನಾರಾಯಣ ರಾವ್ ವಹಿಸಿದ್ದರು. ಸಂಘದ ಅಧ್ಯಕ್ಷರಾದ ಸಿ.ಎಸ್.ರಾವ್, ಕಾರ್ಯದರ್ಶಿ ಬಿ. ಕೃಷ್ಣಮೂರ್ತಿ ರಾವ್ ಮತ್ತು ಕೋಶಾಧಿಕಾರಿ ಡಾ। ವೈ.ಎಸ್.ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಲಾವಿದರನ್ನು ಹೂಗುಚ್ಛ ನೀಡಿ ಗೌರವಿಸಲಾಯಿತು. ಮಟ್ಟು ಕೃಷ್ಣಕುಮಾರ್ ರಾವ್ ಕಾರ್ಯಕ್ರಮ ನಿರೂಪಿಸಿ ಧನ್ಯವಾದವನ್ನಿತ್ತರು.

### ಅಂಬಲಪಾಡಿ ಕೃಷ್ಣರಾಯರಿಗೆ ಶ್ರದ್ಧಾಂಜಲಿ

ತಾ.14-3-2010ರಂದು ಸಂಘದ ಗೌರವಾಧ್ಯಕ್ಷರಾದ ಅಂಬಲಪಾಡಿ ಕೃಷ್ಣರಾಯರ ಗೌರವಾರ್ಥ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ನಮ್ಮ ಸಮಾಜ ಬಾಂಧವರಲ್ಲದೆ ನಿಟ್ಟೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಿನಯ ಹೆಗ್ಡೆ, ಸಿಂಡಿಕೇಟ್ ಬ್ಯಾಂಕಿನ ಮಾಜಿ ಅಧ್ಯಕ್ಷ ಡಾ। ಎನ್. ಕೆ. ತಿಂಗಳಾಯ, ಅಂಬಲಪಾಡಿ ಶ್ರೀ ಲಕ್ಷ್ಮೀ ಜನಾರ್ಧನ ಯಕ್ಷಗಾನ ಸಂಘದ ಅಧ್ಯಕ್ಷ ರಾಘವೇಂದ್ರ ಉಪಾಧ್ಯಾಯ, ಹೈದರಾಬಾದ್‌ನ ಗಾಯತ್ರಿ ಪ್ರೇಮ ಮಂಡಲದ ಸದಸ್ಯರಾದ ದಕ್ಷಿಣಾಮೂರ್ತಿ ಉಪಸ್ಥಿತರಿದ್ದು ದಿವಂಗತರ ಬಗ್ಗೆ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸಿ.ಎಸ್.ರಾಯರು ವಹಿಸಿದ್ದು ಎಲ್ಲರನ್ನೂ

(3ನೇ ಪುಟಕ್ಕೆ)

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ


ಸಮಾಜದಲ್ಲಿ ತನ್ನ ವ್ಯಕ್ತಿತ್ವವನ್ನು ಪ್ರದರ್ಶಿಸಲು ಯಾರಿಗೆ ಮನಸ್ಸಿರುವುದಿಲ್ಲ? ಅದಕ್ಕಾಗಿ ಬಹಳ ಪ್ರಯತ್ನಪಟ್ಟು ಸಾಧನೆ ತೋರುವವರು ಸಾಕಷ್ಟು ಮಂದಿ ಇದ್ದಾರೆ. ಅದಕ್ಕಾಗಿ ಹಿಂದಿನ ಕೆಲವು ಮಹಾ ಪುರುಷರ ಆದರ್ಶ ಜೀವನವನ್ನೇ ಅನುಸರಿಸುವವರು ಇದ್ದಾರೆ. ಅಲ್ಲದೇ ಆಪ್ತರ ಸಂಗವನ್ನು ಮಾಡಿ ಅವರ ಸಲಹೆ, ಅವರಲ್ಲಿರುವ ಒಳ್ಳೆಯ ವಿಚಾರಗಳನ್ನು ತನ್ನ ಕಾರ್ಯವ್ಯಾಪ್ತಿಗೆ ತೆಗೆದುಕೊಂಡು ಅದರಲ್ಲಿ ಯಶಸ್ವಿಯಾಗುತ್ತಾರೆ. ಇದರಿಂದಾಗಿ ಸಮಾಜದಿಂದ ಪುರಸ್ಕೃತರೂ, ಮುಂದಿನ ಪೀಳಿಗೆಗೆ ಸದಾ ನೆನಪಿಸಿಕೊಳ್ಳುವ ಮಹಾನ್ ವ್ಯಕ್ತಿಗಳಾಗುತ್ತಾರೆ.

ಇಂತಹ ಮನೋಭಾವದವರಲ್ಲಿ ಅಹಮ್ಮಿಕೆ ತುಂಬಿಕೊಂಡರೆ ಅವರ ನಡವಳಿಕೆಯ ಪರಿಯೇ ಬೇರೆ ಇರುತ್ತದೆ. ‘‘ಈ ಜಗದಲ್ಲಿ ತಾನೊಬ್ಬನೇ ಬುದ್ಧಿವಂತ, ತಾನು ಮಾಡಿದ್ದೇ ಸರಿ, ತಾನು ಇತರರನ್ನು ಅನುಸರಿಸದೇ ತನ್ನದೇ ಜಾಡಿನಲ್ಲಿ ಸಾಗುತ್ತೇನೆ, ಬೇರೆಯವರನ್ನು ಅನುಸರಿಸುವುದು, ಅವರ ಮಾತನ್ನು ಕೇಳುವುದು ತನಗೆ ಅವಮಾನ’’ ಎಂದು ತಿಳಿದು ಕೊಳ್ಳುತ್ತಾರೆ. ಆತ ದಾರಿ ತಪ್ಪುತ್ತಿದ್ದಾನೆಂದು ಎರಡು ವಿವೇಕದ ಮಾತುಗಳನ್ನು ಇತರರು ತಿಳಿಸಿದರೂ ಆ ಹಿತನುಡಿ ಅವನಿಗೆ ಪಥ್ಯವಾಗುವುದಿಲ್ಲ. ಹೀಗೆ ‘ಊರಿಗೆಲ್ಲಾ ಒಂದು ದಾರಿಯಾದರೆ ಇಂತಹ ಎಡವಟ್ಟರಿಗೆ ಅವರದೇ ದಾರಿ’-ಎಂದಂತೆ ಇಂತಹವರು ಮುಂದೆ ಅಪಾಯಕ್ಕೆ ಸಿಲುಕಿ ಒದ್ದಾಡುವುದನ್ನು ನಾವು ನೋಡಬಹುದು.

ಆದ್ದರಿಂದ ತನ್ನ ಬುದ್ಧಿವಂತಿಕೆಯ ಜೊತೆಗೆ ತಿಳಿದವರ ಅನುಭವಗಳ ಮಾತಿನ ಸಾರವನ್ನು ಬೆರೆಸಿ ಮುನ್ನಡೆದರೆ ಅದರಿಂದ ಯಶಸ್ಸು ಬೇಗನೆ ತನ್ನದಾಗುವುದರಲ್ಲಿ ಸಂಶಯವಿಲ್ಲ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಹೇಮಂತ, ಶಿಶಿರ, ವಸಂತಗಳು ಕಳೆದು ಗ್ರೀಷ್ಮ ಪ್ರವೇಶಿಸಿತು. ಒಂದು ದಿನ ರಾಮ, ಕೃಷ್ಣರು ಮತ್ತಿತರ ಗೊಲ್ಲಬಾಲಕರು ಹಸುಗಳನ್ನು ಮೇಯಿಸುತ್ತಾ ಬಹುದೂರ ಹೋಗಿಬಿಟ್ಟರು. ಗೊಲ್ಲ ಹುಡುಗರು ಹಸಿದು ಬಳಲಿದರು. ಅವರೆಲ್ಲ ರಾಮ, ಕೃಷ್ಣರನ್ನು ಆಹಾರಕ್ಕಾಗಿ ಅಂಗಲಾಚಿದರು. ಆಗ ಶ್ರೀಕೃಷ್ಣನಿಗೆ ಸ್ವಲ್ಪವೇ ದೂರದಲ್ಲಿ ಯಜ್ಞ ನಡೆಯುತ್ತಿರುವುದು ತಿಳಿಯಿತು. ಅವನು ಹೇಳಿದನು, ‘‘ನಿಮ್ಮಲ್ಲಿ ಕೆಲವರು ಪಕ್ಕದಲ್ಲೇ ನಡೆಯುವ ಯಜ್ಞದಲ್ಲಿಗೆ ಹೋಗಿರಿ. ಅಲ್ಲಿ ಕೆಲವು ಯಾಜ್ಞಿಕರು ಸ್ವರ್ಗಾರ್ಥವಾಗಿ ಆಂಗೀರಸವೆಂಬ ಯಜ್ಞವನ್ನು ಮಾಡುತ್ತಿದ್ದಾರೆ. ನಮ್ಮಿಬ್ಬರ ಹೆಸರನ್ನು ಹೇಳಿ ಅವರಿಂದ ಅನ್ನವನ್ನು ಯಾಚಿಸಿರಿ’’. ಗೋಪ ಕುಮಾರರು ಯಜ್ಞಶಾಲೆಗೆ ಹೋಗಿ ಸಾಷ್ಟಾಂಗ ಪ್ರಣಾಮ ಮಾಡಿ ರಾಮ, ಕೃಷ್ಣರ ಹೆಸರನ್ನು ಹೇಳಿ ಅನ್ನವನ್ನು ಬೇಡಿದರು. ಆದರೆ ಆ ಬ್ರಾಹ್ಮಣರು ಅವರನ್ನು ಕಡೆಗಣಿಸಿ ಏನೂ ಉತ್ತರಿಸದೆ ಯಜ್ಞದಲ್ಲಿ ನಿರತರಾದರು. ಗೊಲ್ಲ ಬಾಲಕರು ನಿರಾಶೆಯಿಂದ ಹಿಂದಕ್ಕೆ ಬಂದು ರಾಮ, ಕೃಷ್ಣರಿಗೆ ಈ ವಿಷಯವನ್ನು ತಿಳಿಸಿದರು. ಆಗ ಶ್ರೀಕೃಷ್ಣನು ಮುಗುಳುನಕ್ಕು ಎಂದನು, ‘‘ನೀವೀಗ ಆ ಯಾಜ್ಞಿಕರ ಪತ್ನಿಯರ ಹತ್ತಿರ ಹೋಗಿ ನಮ್ಮ ಹೆಸರನ್ನು ಹೇಳಿ ಅನ್ನವನ್ನು ಕೇಳಿರಿ. ಅವರು ನಮ್ಮ ಪರಮ ಭಕ್ತೆಯರು. ನಿಮಗೆ ಖಂಡಿತವಾಗಿಯೂ ಯಥೇಚ್ಛ ಊಟವನ್ನು ಕೊಡುವರು’’. ಬಾಲಕರು ಹಾಗೇ ಹೋಗಿ ದ್ವಿಜ ಪತ್ನಿಯರಿಗೆ ಕೃಷ್ಣನ ಸಂದೇಶವನ್ನು ತಿಳಿಸಿ ಅನ್ನವನ್ನು ಯಾಚಿಸಿದರು. ಯಾಜ್ಞಿಕರ ಹೆಂಡಂದಿರು ಕೃಷ್ಣನ ಹೆಸರನ್ನು ಕೇಳುತ್ತಲೇ ಅವನನ್ನು ಕಾಣುವ ತವಕದಿಂದ ಚತುರ್ವಿಧ ಭೋಜನವನ್ನು ತೆಗೆದುಕೊಂಡು ಹೊರಟೇ ಬಿಟ್ಟರು. ಬಂಧು-ಬಾಂಧವರು, ಗಂಡಂದಿರು ತಡೆದರೂ ಲೆಕ್ಕಿಸದೆ ಅವರು ರಾಮ, ಕೃಷ್ಣರಿದ್ದೆಡೆಗೆ ಧಾವಿಸಿ ಬಂದರು. ತಮ್ಮ ಹೃದಯದ ಆರಾಧ್ಯದೈವವಾದ ಶ್ರೀಕೃಷ್ಣನನ್ನು ಕಂಡು ಧನ್ಯರಾದರು. ತಾವು ತಂದ ಊಟವನ್ನು ಅವರಿಗಿತ್ತರು. ಆದರೆ ಅವರನ್ನು ಬಿಟ್ಟು ಹಿಂದಿರುಗಲು ನಿರಾಕರಿಸಿದರು. ಅವರೆಂದರು, ‘‘ಭಗವಂತ, ಅನೇಕ ಜನ್ಮಗಳ ಪುಣ್ಯದಿಂದ ನಿನ್ನ ದರ್ಶನ ಲಾಭವಾಗಿದೆ. ನಿನ್ನನ್ನು ಬಿಟ್ಟು ನಾವು ಹೇಗೆ ಹೋಗಲಿ? ನಮ್ಮ ಗಂಡಂದಿರು ನಮ್ಮನ್ನು ಸ್ವೀಕರಿಸಲಾರರೆಂದು ಅನಿಸುತ್ತದೆ. ಯಾಕೆಂದರೆ ನಾವು ಅವರ ಆಜ್ಞೆಯನ್ನು ಮೀರಿ ಇಲ್ಲಿಗೆ ಬಂದವರು’’. ಅದಕ್ಕೆ ಕೃಷ್ಣನೆಂದನು, ‘‘ದೇವಿಯರೇ, ನಿಮ್ಮ ಪತಿಯರು ಅಜ್ಞಾನದಿಂದ ನನ್ನನ್ನು ತಿಳಿಯದಾದರು. ಈಗ ಅವರಿಗೆ ಜ್ಞಾನೋದಯ ವಾಗಿದೆ. ಅವರು ನಿಮ್ಮನ್ನು ಆದರದಿಂದ ಬರಮಾಡಿಕೊಳ್ಳುವರು. ನೀವಿಲ್ಲದೆ ಅವರು ಯಜ್ಞವನ್ನು ಪೂರ್ಣಗೊಳಿಸುವಂತಿಲ್ಲ. ಆದುದರಿಂದ ನೀವು ಹಿಂದಕ್ಕೆ ಹೋಗಿರಿ. ನಾನು ಯಾವಾಗಲೂ ನಿಮ್ಮ ಹೃದಯದಲ್ಲೇ ನೆಲೆಸಿರುವೆನು’’. ಇದರಿಂದ ಆಶ್ವಸ್ತರಾದ ವಿಪ್ರ ಪತ್ನಿಯರು ಯಜ್ಞಶಾಲೆಗೆ ಹಿಂದಿರುಗಿದರು. ಅಷ್ಟರಲ್ಲಿ ಯಜ್ಞನಿರತರಾದ ಬ್ರಾಹ್ಮಣರಿಗೂ ಶ್ರೀಕೃಷ್ಣ ಯಜ್ಞಪುರುಷನೆಂಬುದು ಅರ್ಥವಾಗಿತ್ತು. ತಮ್ಮ ಪತ್ನಿಯರನ್ನು ಪ್ರೀತಿ, ಗೌರವಗಳಿಂದ ಸ್ವಾಗತಿಸಿ ಯಜ್ಞವನ್ನು ಪೂರ್ತಿ ಮಾಡಿದರು. ಒಬ್ಬ ಸ್ತ್ರೀ ಮಾತ್ರ ತನ್ನ ಗಂಡನು ತಡೆದದ್ದರಿಂದ ಕೃಷ್ಣನ ಧ್ಯಾನದಲ್ಲೇ ತನ್ನ ಭೌತಿಕ ಶರೀರವನ್ನು ತ್ಯಜಿಸಿ ಬಿಟ್ಟಿದ್ದಳು. ಅವಳು ಭಗವಂತನಲ್ಲಿ ಒಂದಾಗಿ ಹೋದಳು. ರಾಮ, ಕೃಷ್ಣರು ಮೊದಲು ಗೋಪ ಬಾಲಕರಿಗೆ ಊಟವನ್ನು ಇತ್ತು, ಬಳಿಕ ತಾವೂ ಉಂಡರು.

ಯಾಜ್ಞಿಕರಿಗೆ ಪಶ್ಚಾತ್ತಾಪವಾಗಿತ್ತು. ಆದರೂ ಅವರು ವೃಂದಾವನಕ್ಕೆ ಹೋಗಿ ರಾಮ, ಕೃಷ್ಣರನ್ನು ಕಾಣಲಿಲ್ಲ. ಅದಕ್ಕೆ ಕಾರಣ ಕಂಸನ ಭಯ. ಆದುದರಿಂದ ಅವರು ಅವರನ್ನು ಧ್ಯಾನಯೋಗದಿಂದ ಕಾಣತೊಡಗಿದರು.

ಹೀಗೆ ರಾಮ, ಕೃಷ್ಣರು ತಮ್ಮ ಲೀಲೆಗಳನ್ನು ತೋರಿಸುತ್ತಾ ವೃಂದಾವನದಲ್ಲಿ ನಿತ್ಯೋತ್ಸವವನ್ನು ಮಾಡುತ್ತಿದ್ದರು. ಒಮ್ಮೆ ನಂದ ಮೊದಲಾದ ಗೋಪಾಲಕರು ಇಂದ್ರಯಜ್ಞಕ್ಕೆ ಅಣಿ ಮಾಡುತ್ತಿದ್ದುದನ್ನು ನೋಡಿ ಕೃಷ್ಣನಿಗೆ ಕುತೂಹಲ ಮೂಡಿತು. ಅವನು ಯಜ್ಞದ ಉದ್ದೇಶವೇನೆಂದು ತನ್ನ ತಂದೆಯನ್ನು ವಿಚಾರಿಸಿದನು. ಆಗ ನಂದ ಗೋಪನು ಹೇಳಿದನು, ‘‘ಅಪ್ಪಾ ಮಗು, ನಾವು ಇಂದ್ರನಿಗಾಗಿ ಒಂದು ಯಜ್ಞವನ್ನು ಮಾಡುತ್ತಿದ್ದೇವೆ. ಅವನು ಮೇಘಾಧಿಪತಿ. ನಮಗೆ ಮಳೆ ಬರುವುದು ಅವನ ಅನುಗ್ರಹದಿಂದಲೇ. ಮಳೆಯಿಂದ ತೊಯ್ದ ಭೂಮಿ ಸಸ್ಯಸಮೃದ್ಧವಾಗುವುದು. ಭೂಮಿಯು ಸಸ್ಯಶಾಲಿನಿಯಾದಾಗ ನಾವೆಲ್ಲ ಸುಖಿಗಳಾಗುತ್ತೇವೆ. ಈ ಕೃತಜ್ಞತೆಯಿಂದ ನಾವು ಇಂದ್ರನನ್ನು ಯಜ್ಞದ ಮೂಲಕ ಆರಾಧಿಸುತ್ತೇವೆ. ಇದರಿಂದ ತ್ರಿವರ್ಗ ಸಾಧನೆಯೂ ಆಗುತ್ತದೆ. ಇದು ನಮ್ಮ ಕುಲಪರಂಪರೆಯ ಸಂಪ್ರದಾಯವೂ ಆಗಿದೆ’’.

ಆದರೆ ಶ್ರೀಕೃಷ್ಣನಿಗೆ ಇಂದ್ರನ ಅಹಂಕಾರವನ್ನು ಮುರಿಯುವ ಆಶೆಯಾಯಿತು. ಆದುದರಿಂದ ಇಂದ್ರಯಜ್ಞವನ್ನು ತಡೆಯಬೇಕೆಂದು ಯೋಚಿಸಿ ತನ್ನ ತಂದೆಗೆ ಇಂತೆಂದನು, ‘‘ಅಪ್ಪಾಜಿ, ಜಗತ್ತಿನಲ್ಲಿ ಮಾನವರು ತಂತಮ್ಮ ಕರ್ಮಗಳಿಗೆ ತಕ್ಕಂತೆ ಫಲಗಳನ್ನು ಪಡೆಯುತ್ತಾರೆ. ಯಾವ ದೇವರೂ ಕರ್ಮವನ್ನು ಮೀರಿ ಸ್ವತಂತ್ರವಾಗಿ ಫಲವನ್ನು ಕೊಡಲಾರ. ಇಂತಹ ದೇವರನ್ನೇಕೆ ಆರಾಧಿಸಬೇಕು? ಆದುದರಿಂದ ನಮಗೆ ಸಹಾಯಕರಾದ ಬ್ರಾಹ್ಮಣರನ್ನೂ, ನಮ್ಮ ಜೀವನಕ್ಕೆ ಆಧಾರಗಳಾದ ಗೋವುಗಳನ್ನೂ, ಮೋಡಗಳನ್ನು ತಡೆದು ಮಳೆ ಸುರಿಯುವಂತೆ ಮಾಡುವ ಉನ್ನತ ಶಿಖರದ ಗೋವರ್ಧನ ಪರ್ವತವನ್ನೂ ಆರಾಧಿಸೋಣ. ಇದೇ ನಿಜವಾದ ಕೃತಜ್ಞತೆ’’. ನಂದ ಮೊದಲಾದ ಗೋಪರಿಗೂ ಈ ತರ್ಕ ಸರಿಯೆಂದು ಕಂಡಿತು. ಆದುದರಿಂದ ಕೃಷ್ಣನು ಹೇಳಿದ ದೇವತೆಗಳನ್ನು ಕುರಿತು ಯಜ್ಞ ಮಾಡಲು ತೊಡಗಿದರು. ಇಂದ್ರಯಜ್ಞಕ್ಕೆಂದು ಅಣಿ ಮಾಡಿದ ಸಾಮಗ್ರಿಗಳಿಂದಲೇ ಗೋವರ್ಧನ ಯಜ್ಞವನ್ನು ನೆರವೇರಿಸಿದರು.

ಶ್ರೀಕೃಷ್ಣನಿಂದಾಗಿ ತನ್ನ ಯಜ್ಞ ನಡೆಯಲಿಲ್ಲವೆಂದು ತಿಳಿದ ಇಂದ್ರನಿಗೆ ರೋಷವುಕ್ಕಿತು. ಮೂರು ಲೋಕಗಳ ಒಡೆಯನಾದ ತನಗೆ ಇಂತಹ ಅವಮಾನವೇ? ಇವರಿಗೆ ಬುದ್ಧಿ ಕಲಿಸಲೇ ಬೇಕು ಎಂದು ನಿಶ್ಚಯಿಸಿದ ಇಂದ್ರನು ಮಹಾ ಮಹಾ ಮೇಘಗಳನ್ನು ವೃಂದಾವನಕ್ಕೆ ಕಳುಹಿಸಿದನು. ಭಯಂಕರ ಬಿರುಗಾಳಿ, ಮಿಂಚು, ಗುಡುಗುಗಳ ಸಹಿತ ಪ್ರಲಯ ಕಾಲದ ಮಳೆಯಂತೆ ಮುಸಲಧಾರೆಯನ್ನು ಸುರಿಸಿದನು. ವೃಂದಾವನ ನೆರೆಯಲ್ಲಿ ಮುಳುಗಿತು. ಪಶು, ಪಕ್ಷಿ, ಮಾನವರು ಬದುಕುವ ಆಸೆ ತೊರೆದು ಭಗವಂತನನ್ನು ಮೊರೆ ಹೊಕ್ಕರು. ಆಗ ಬಾಲಕೃಷ್ಣನು ಮುಗುಳುನಗುತ್ತ ಮಗುವು ನಾಯಿ ಕೊಡೆಯನ್ನು ಎತ್ತಿ ಹಿಡಿಯುವಂತೆ ತನ್ನ ಕಿರು ಬೆರಳಿನಿಂದ ಗೋವರ್ಧನ ಪರ್ವತವನ್ನು ಛತ್ರಿಯಂತೆ ಎತ್ತಿ ಹಿಡಿದನು. ಅದರ ಕೆಳಗೆ ಗೋವುಗಳು, ಗೋವಳರು ಹೋಗಿ ನಿಂತುಕೊಂಡರು. ಹೀಗೆ ಏಳು ದಿನಗಳವರೆಗೆ ಕೃಷ್ಣನು ಕದಲದೇ ನಿಂತನು. ಮಳೆಯಿಂದ ವೃಂದಾವನ ವಾಸಿಗಳ ಕೂದಲಿಗೂ ಹಾನಿಯಾಗಲಿಲ್ಲ. ಇದನ್ನು ಕಂಡ ಇಂದ್ರನಿಗೆ ಮೊದಲು ಆಶ್ಚರ್ಯವಾಯಿತು. ಅನಂತರ ಅವನ ಮನಸ್ಸಿನಿಂದ ಮದ ಇಳಿದು ಹೋಯಿತು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಹಿತೇನ ಸಹಿತಂ ಸಾಹಿತ್ಯಂ ।**

ಅಂದರೆ ಯಾವುದು ಮನಸ್ಸಿಗೆ ಹಿತವನ್ನುಂಟು ಮಾಡುವುದೋ ಅದೇ ಸಾಹಿತ್ಯ.

**ಪುಸ್ತಕ ಪರಿಚಯ :**

ಮರೂರು ಶ್ರೀದುರ್ಗಾಪರಮೇಶ್ವರೀ ಕ್ಷೇತ್ರ ಮಹಾತ್ಮ್ಯೆ
(ಭಾಮಿನಿ ಷಟ್ಪದಿ-ಕಿರುಕಾವ್ಯ)
ಚಂದ್ರಚಾಪ (ಕವನ ಸಂಗ್ರಹ)
ಲೇಖಕರು : ಮ.ನಾ.ಹೆಬ್ಬಾರ, ಬೆಳ್ವೆ
ಪ್ರಕಾಶನ : ಶ್ರೀ ದುರ್ಗಾಪ್ರಕಾಶನ, ಮರೂರು, ಅಂಚೆ : ಬೆಳ್ವೆ-576212.

ಇತ್ತೀಚೆಗೆ ಉಡುಪಿಯಲ್ಲಿ ಜರಗಿದ ಉಡುಪಿ ತಾಲೂಕು ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೊಂಡ ಈ ಎರಡೂ ಕೃತಿಗಳ ರಚಯಿತರು ಮ.ನಾ.ಹೆಬ್ಬಾರರವರು. ಲೇಖಕರು ಹೇಳಿದಂತೆ-ನನ್ನ ಆರಾಧ್ಯ ದೇವಿ ಗ್ರಾಮ ದೇವತೆ ಶ್ರೀ ದುರ್ಗಾಪರಮೇಶ್ವರಿಯು ತನ್ನ ಚರಿತ್ರೆಯನ್ನು ‘ಮಹಾತ್ಮ್ಯೆ’ ಎಂಬ ಹೆಸರಿನಲ್ಲಿ ಬರೆಯುವಂತೆ ಪ್ರೇರೇಪಿಸಿದಂತೆ ಈ ಕಾವ್ಯವು ಮೂಡಿ ಬಂದಿದೆ. ಆಗಾಗ ಭಾಮಿನಿ ಷಟ್ಪದಿಯಲ್ಲಿ ಕೆಲವು ಪದ್ಯಗಳನ್ನು ನಾನು ಬರೆಯುತ್ತಿರುವುದನ್ನು ಕಂಡು ಶ್ರೀ ನೀಲಾವರ ಸುರೇಂದ್ರ ಅಡಿಗರು ‘ಹೆಬ್ಬಾರರೇ ನೀವೇಕೆ ಭಾಮಿನಿಯಲ್ಲಿಯೇ ಕಾವ್ಯ ಬರೆಯಬಾರದು?’ ಎಂದಿದ್ದರು. ಈ ನುಡಿಯು ನನಗೆ ಕಾವ್ಯ ಬರೆಯಲು ಮೂಲವಾಯಿತು. ಒಮ್ಮೆ ಯಕ್ಷಗಾನ ಪ್ರಸಂಗದ ರೂಪದಲ್ಲಿ ಶ್ರೀ ಅಂಬಾತನಯರು ಬರೆದು ಕೊಟ್ಟುದನ್ನೇ ಆಧಾರವಾಗಿಟ್ಟುಕೊಂಡು ಈ ಕಾವ್ಯವನ್ನು ಬರೆದೆ.

‘ನಲ್‌ನುಡಿ ಸೇಸೆ’ಯಲ್ಲಿ ಅಂಬಾತನಯ, ಮುದ್ರಾಡಿಯವರು ತಿಳಿಸಿದಂತೆ ಪ್ರತಿಯೊಬ್ಬರಿಗೂ ಅವರವರು ಹುಟ್ಟಿ ಬೆಳೆದ ಊರು ದೊಡ್ಡದು; ಅಲ್ಲಿನ ಕ್ಷೇತ್ರ ದೊಡ್ಡದು. ಮ.ನಾ. ಹೆಬ್ಬಾರರು ಮರೂರಿನವರು. ಇಲ್ಲಿನ ಗ್ರಾಮ ದೇವತೆ ಶ್ರೀ ದುರ್ಗಾಪರಮೇಶ್ವರೀ. ಅಂದ ಮೇಲೆ ಆಕೆಯ ಮಹಾತ್ಮ್ಯೆಯನ್ನು ಕಾವ್ಯಾರಾಧನೆಯಿಂದ ಆರಾಧಿಸಿ ಧನ್ಯತೆ ಹೊಂದುವ ಹೇರಾಸೆ ಎಲ್ಲಕ್ಕಿಂತ ದೊಡ್ಡದು. ಕೃತಿ ಮೈದಳೆದ ಬಗೆಯಿದು.

‘ಚಂದ್ರಚಾಪ’ ಕವನ ಸಂಗ್ರಹದ ಬಗ್ಗೆ ಲೇಖಕರ ‘ಬಿನ್ನಹ’ದ ಕೆಲವು ಸಾಲುಗಳು-ವಿದೇಶದಲ್ಲಿರುವ ಮಗ-ಸೊಸೆಯರ ಒತ್ತಾಯಕ್ಕೆ ಕಟ್ಟುಬಿದ್ದು ಸಪತ್ನೀಕನಾಗಿ 2009ರ ಮೇಯಲ್ಲಿ ಅಮೇರಿಕಾಕ್ಕೆ ಹೋಗಿ ಆರು ತಿಂಗಳು ಅಲ್ಲಿ ನಿಂತೆ. ಬಿಡುವಿನ ಸಮಯದಲ್ಲಿ ಬೇಸರ ಕಳೆಯಲಿಕ್ಕಾಗಿ ಮನಸ್ಸಿಗೆ ತೋಚಿದ್ದನ್ನು ಪದ್ಯರೂಪದಲ್ಲಿ ಗೀಚಿದ್ದೇ ಈ ಕವನ ಸಂಗ್ರಹವು ಹೊರಬರಲು ಕಾರಣ. ವಿವಿಧ ವಿಷಯಗಳನ್ನಾಯ್ದುಕೊಂಡು ಈ ಕವನಗಳನ್ನು ಬರೆದಿದ್ದಾಗಿದೆ.


ಮನಾ ಹೆಬ್ಬಾರರ ಕವಿತೆಗಳ ಮುಖ್ಯ ಲಕ್ಷಣ ಅವುಗಳ ಸರಳತೆ. ಸರಳತೆಯೂ ಹಿರಿಮೆಯನ್ನು ಪಡೆಯುವ ಒಂದು ಗುಣವೇ ಆಗಿದೆ. ಕನ್ನಡ ಸಾಹಿತ್ಯದಲ್ಲಿ ಸರಳತೆಯಿಂದಲೇ ಹಿರಿಮೆಯನ್ನು ಸಾಧಿಸಿದ ಮಾಸ್ತಿಯವರ ಬರವಣಿಗೆಯ ಮಾದರಿ ಇದೆ ಎಂದು ಡಾ। ಪಾದೇಕಲ್ಲು ವಿಷ್ಣು ಭಟ್ಟ ಇವರು ‘ಮುನ್ನುಡಿ’ಯಲ್ಲಿ ತಿಳಿಸಿದ್ದಾರೆ.

ವಿಷಯ ವೈವಿಧ್ಯ ವಿಸ್ತಾರದ 40 ಕವಿತೆಗಳು ಈ ಕೃತಿಯಲ್ಲಿ ಸೊಗಸಾಗಿ ಮೂಡಿಬಂದಿವೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ

# ಶ್ರೀ ಅಂಬಲಪಾಡಿ ಕೃಷ್ಣರಾಯರ ಮಾನವೀಯ ಮುಖ



**- ವೈ. ಶಂಕರನಾರಾಯಣ ರಾವ್, ಪಡುಬಿದ್ರಿ**

ನನ್ನ ಚಿಕ್ಕಮ್ಮ ಸರಸ್ವತಿಯವರನ್ನು ಕೃಷ್ಣರಾಯರ ಅಣ್ಣ ನಾರಾಯಣ ರಾಯರಿಗೆ ಮದುವೆ ಮಾಡಿಕೊಡಲಾಗಿತ್ತು. ನಾನು ಮಂಗಳೂರಿನಲ್ಲಿ ಕೆಲಸಕ್ಕೆ ಸೇರಿ 3-4 ತಿಂಗಳು ಕಳೆದಿರಬೇಕು. ನಮ್ಮ ದುರವಸ್ಥೆಯನ್ನು ಸಂಬಂಧಿಕರಾರೋ ಕೃಷ್ಣರಾಯರಿಗೆ ತಿಳಿಸಿರಬೇಕು. ನನಗೆ ಕೆಲಸ ತೆಗೆಸಿಕೊಡುವೆನೆಂದೂ ತನ್ನನ್ನು ಒಮ್ಮೆ ನಾನು ಕಾಣಬೇಕೆಂದೂ ಅವರು ನನ್ನ ತಂದೆಯವರಿಗೆ ಹೇಳಿ ಕಳುಹಿಸಿದರು. ಅದು ಬಹುಶಃ ಅಕ್ಟೋಬರ್ 1961ರಲ್ಲಿ ಇರಬೇಕು.

ನಮಗೆ ನಮ್ಮ ಅಕ್ಕನ ಕಡೆಯಿಂದ ಹೊಸದಾಗಿ ಸಂಬಂಧವಾದ ಸುಬ್ರಾಯರೆಂಬವರು ಆಗ ಅಂಬಲಾಡಿ ದೇವಸ್ಥಾನದ ಸಮೀಪ ವಾಸವಾಗಿದ್ದರು. ದೇಶ ಸುತ್ತಿ ಕೋಶ ಓದಿದ್ದ ಈ ಹಿರಿಯರದ್ದು ಪಾದರಸದಂತೆ ತುಂಬಾ ಚುರುಕಾದ ವ್ಯಕ್ತಿತ್ವ. ಉಡುಪಿಯಲ್ಲಿ ಇರುವ ಹಳಬರಿಗೆ ಈ ಹಿರಿಯರನ್ನು ಕಂಡ ನೆನಪು ಈಗಲೂ ಇರಬಹುದು. ಒಂದು ಆದಿತ್ಯವಾರದ ದಿನ ಸುಬ್ರಾಯರು ನನ್ನನ್ನು ಕೃಷ್ಣರಾಯರ ಅಂಬಲಪಾಡಿಯ ನಿವಾಸಕ್ಕೆ ಕರೆದುಕೊಂಡು ಹೋದರು. ಸುಬ್ರಾಯರೇನೋ ಕೃಷ್ಣರಾಯರಿಗೆ ನಿಟಕವಾಗಿದ್ದವರು; ಆದರೆ ನಾನು ಕೃಷ್ಣರಾಯರನ್ನು ಕಂಡದ್ದು, ಅವರ ಸಂಪರ್ಕಕ್ಕೆ ಬಂದದ್ದು ಅದೇ ಮೊದಲು. ಅಬೋಧ ಬಾಲಕನಾಗಿದ್ದ ನನಗೆ ಅವರ ಎದುರಿಗೆ ನಿಲ್ಲುವ ಧೈರ್ಯವೇ ಇರಲಿಲ್ಲ. ಬಡತನ ತಂದ ಕೀಳರಿಮೆ ಬೇರೆ. ಬಡತನಕ್ಕೆ ಹಲವು ಹಿಂಜರಿಕೆಗಳಲ್ಲವೇ? ಆ ಸೌಮ್ಯ, ಹಸನ್ಮುಖ, ಆಕರ್ಷಕ ವ್ಯಕ್ತಿತ್ವದ ಎದುರು ನಾನು ತೀರಾ ಕುಗ್ಗಿ ಹೋದೆ; ಕುಬ್ಜನಾದೆ. ಅವರು ನಮ್ಮಿಬ್ಬರನ್ನೂ ಕುಳಿತುಕೊಳ್ಳಲು ಹೇಳಿ ಉಪಚರಿಸಿದರು. ನನ್ನ ಪರವಾಗಿ ಹೇಳಬೇಕಾದುದೆಲ್ಲವನ್ನೂ ಸುಬ್ರಾಯರೇ ಹೇಳಿದರು. ನನ್ನ ಅಂಕ ಪಟ್ಟಿಯನ್ನು ಪಡೆದುಕೊಂಡು ನೋಡಿದ ಕೃಷ್ಣರಾಯರು "ಇವರಿಗೆ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕಗಳಿವೆ. ಪರ್ಸನಾಲಿಟಿ ಕೂಡಾ ಚೆನ್ನಾಗಿದೆ. ಕೆಲಸ ಖಂಡಿತ ಸಿಗುತ್ತದೆ. ಆದರೆ ಇವರಿಗೆ ಮುಂದಿನ ಜನವರಿ 1962ರಲ್ಲಿ 18 ವರ್ಷ ತುಂಬುವುದರಿಂದ ಈಗ ಇರುವ ಕೆಲಸದಲ್ಲಿಯೇ ಮುಂದುವರಿಯಲಿ. ಪುನಃ ಡಿಸೆಂಬರ್ 1961ರಲ್ಲಿ ಬಂದು ನನ್ನನ್ನು ಕಾಣಲಿ" ಎಂದು ಹೇಳಿ ಧೈರ್ಯ ತುಂಬಿದರು. ಇಲ್ಲಿ ಗಮನಿಸಿರಿ, ಕೃಷ್ಣರಾಯರು ನನ್ನಂತಹ ಬಾಲಕನನ್ನೂ ಬಹುವಚನದಲ್ಲೆಯೇ ಸಂಬೋಧಿಸಿದ್ದರು; ಮುಂದೆಯೂ ಹಾಗೆಯೇ ಸಂಬೋಧಿಸುತ್ತಿದ್ದರು.

ಹಾಗೆ ನಾನು ಮುಂದಿನ ಡಿಸೆಂಬರ್ 1961ರಲ್ಲಿ ಮತ್ತೊಮ್ಮೆ ಅವರನ್ನು ಭೇಟಿಯಾದೆ. ಆಗ ನಮ್ಮ ಸಿಂಡಿಕೇಟ್ ಬ್ಯಾಂಕ್ ಖಾಸಗೀ ವಲಯದಲ್ಲಿದ್ದು "ದಿ ಕೆನರಾ ಇಂಡಸ್ಟ್ರಿಯಲ್ ಆ್ಯಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್" ಎಂಬ ದೀರ್ಘ ಹೆಸರನ್ನು ಹೊಂದಿದ್ದು ಉಡುಪಿಯ "ಮುಕುಂದ ನಿವಾಸ" ಪ್ರಧಾನ ಕಾರ್ಯಾಲಯದಿಂದ ಕಾರ್ಯಾಚರಿಸುತ್ತಿತ್ತು. ಕೃಷ್ಣರಾಯರು ಆಗ ಬ್ಯಾಂಕಿನ "ಚೀಫ್ ಲಾ ಆಫೀಸರ್" ಆಗಿದ್ದರೆಂದು ನನ್ನ ನೆನಪು. ಅವರು ನನ್ನನ್ನು ತಮ್ಮ ಕಛೇರಿಗೆ ಬರುವಂತೆ ತಿಳಿಸಿ ಅವರ ಸಿಬ್ಬಂದಿಯಿಂದಲೇ ಕೆಲಸಕ್ಕೆ ಅರ್ಜಿಯನ್ನು ಟೈಪ್ ಮಾಡಿಸಿ ನನ್ನ ಸಹಿಯನ್ನು ಪಡೆದುಕೊಂಡರು. ತಮ್ಮ ಸಂಸ್ಥೆಗಿಂತಲೂ ಒಳ್ಳೆಯ ಸಂಸ್ಥೆಯಲ್ಲಿ ಕೆಲಸ ಸಿಗಲಿ ಎಂಬ ಸದುದ್ದೇಶದಿಂದ ಎಲ್‌ಐಸಿಗೂ ನನ್ನಿಂದ ಒಂದು ಅರ್ಜಿಯನ್ನು ಹಾಕಿಸಿದರು. ಅವರು ಸೂಚಿಸಿದಂತೆ ಮರುದಿನ ಮಣಿಪಾಲದಲ್ಲಿದ್ದ ಬ್ಯಾಂಕಿನ ಆಗಿನ ಮೇನೇಜಿಂಗ್ ಡೈರೆಕ್ಟರ್ ಶ್ರೀ ಟಿ.ಎ.ಪೈಯವರ ನಿವಾಸಕ್ಕೆ ಹೋಗಿ ಅವರನ್ನು ನಿವಾಸದ ಬಾಗಿಲಲ್ಲಿ ಭೇಟಿಯಾಗಿ ನನ್ನ ಅಹವಾಲುಗಳನ್ನು ಸಲ್ಲಿಸಿದೆ. ನನಗೆ ಉತ್ತಮ ಅಂಕಗಳಿರುವುದರಿಂದ ಕೆಲಸ ಖಂಡಿತ ಕೊಡುತ್ತೇವೆ ಎಂಬ ಆಶ್ವಾಸನೆಯೂ ಅವರಿಂದ ದೊರಕಿತು.

ಮುಂದಿನ ಜನವರಿ 1962ರಲ್ಲಿ ನನಗೆ ಸ್ವತಃ ಶ್ರೀ ಟಿ.ಎ.ಪೈಯವರೇ ಸಹಿ ಮಾಡಿದ್ದ ನೇಮಕಾತಿ ಪತ್ರವೂ ತಲಪಿತು. ನನ್ನನ್ನು ತಾತ್ಕಾಲಿಕವಾಗಿ ಭದ್ರಾವತಿ ಶಾಖೆಗೆ ಕ್ಲರ್ಕ್ ಆಗಿ ನೇಮಕ ಮಾಡಿದ್ದರು. ಭದ್ರಾವತಿಗೆ ಹೋಗುವ ಮೊದಲು ಕೃಷ್ಣರಾಯರನ್ನು ಅವರ ನಿವಾಸದಲ್ಲಿ ಭೇಟಿಯಾದೆ. ಅವರು ನನ್ನನ್ನು ವಾತ್ಸಲ್ಯದಿಂದ ಮೈದಡವಿ, ಆಲಿಂಗಿಸಿ ಬೀಳ್ಕೊಟ್ಟ ನೆನಪು ಈಗಲೂ ನನ್ನ ಹೃದಯದಲ್ಲಿ ಹಸಿರಾಗಿ ಉಳಿದಿದೆ.

ಭದ್ರಾವತಿಯಲ್ಲಿ ನನ್ನ ಪ್ರಾರಂಭದ ಸಂಬಳ ಕೇವಲ ರೂ.120.00. ಆರು ತಿಂಗಳ ಬಳಿಕ ನನಗೆ ತಾತ್ಕಾಲಿಕ ನೆಲೆಯಲ್ಲಿಯೇ ಹುಬ್ಬಳ್ಳಿಗೆ ವರ್ಗಾವಣೆಯಾಯಿತು. ಆ ಸಂದರ್ಭದಲ್ಲಿ ನಾನು ಉಡುಪಿಗೆ ಬಂದವನು ಖರ್ಚಿಗೆ ಸಾಕಷ್ಟು ಹಣ ಇಲ್ಲದೆ ಇದ್ದುದರಿಂದ ಕೃಷ್ಣರಾಯರ ಕೈಯಿಂದಲೇ ಹತ್ತಿಪ್ಪತ್ತು ರೂಪಾಯಿಗಳನ್ನು ಕೈಗಡ ಪಡೆದುಕೊಂಡು ಹುಬ್ಬಳ್ಳಿಗೆ ಹೋದೆ. ಬ್ಯಾಂಕಿಗೆ ಸೇರಿ ಒಂದು ವರ್ಷದೊಳಗೆ ನನಗೆ ಖಾಯಂ ಕೂಡಾ ಆಯಿತು. 5 ವರ್ಷಗಳ ಬಳಿಕ ನಾನು ಅನಾರೋಗ್ಯದಿಂದ ಇದ್ದ ಸಂದರ್ಭದಲ್ಲಿ ಕೃಷ್ಣರಾಯರು ಜಿಲ್ಲೆಗೆ ವರ್ಗಾವಣೆ ಮಾಡಿಸಿಕೊಟ್ಟರು. ಅಲ್ಲಿಂದೀಚೆಗೆ ನಾನು ವರ್ಷದಲ್ಲಿ ಒಂದೆರಡು ಬಾರಿ ಅವರನ್ನು ಭೇಟಿಯಾಗುತ್ತಿದ್ದೆ. ಭೇಟಿಯಾದಾಗಲೆಲ್ಲಾ ಅವರು ನನ್ನ ಆರ್ಥಿಕ ಪರಿಸ್ಥಿತಿ ಹೇಗಿದೆಯೆಂದು ಕಳಕಳಿಯಿಂದ ವಿಚಾರಿಸುತ್ತಿದ್ದರು. ನನ್ನ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದೆಯೆಂದು ನಾನು ಅರ್ಧ ಸತ್ಯದ ಮಾತುಗಳಿಂದ ಅವರನ್ನು ನಂಬಿಸುತ್ತಿದೆ. ಆದರೆ ನನ್ನ ಆರ್ಥಿಕ ಸ್ಥಿತಿ ಉತ್ತಮವಾದದ್ದು ನಾನು ನನ್ನ 32ನೇ ವರ್ಷ ಪ್ರಾಯದಲ್ಲಿ ವಿವಾಹವಾದ ನಂತರವೇ; ನನ್ನ ಕಿರಿಯ ಸಹೋದರಿಯರು, ಸಹೋದರರೆಲ್ಲರೂ ತಂತಮ್ಮ ವಿದ್ಯಾಭ್ಯಾಸಗಳನ್ನು ಮುಗಿಸಿ ಬೇರೆ ಬೇರೆ ನೌಕರಿಗಳಿಗೆ ಸೇರಿ ನೆಲೆ ಕಂಡು ಕೊಂಡ ನಂತರವೇ ಎಂಬುದು ವಿಧಿಯ ವಿಪರ್ಯಾಸವೇ ಸರಿ. ಮುಂದೆ ನಾನು ಮುಂಬಡ್ತಿಗೊಂಡು ಬ್ಯಾಂಕಿನಲ್ಲಿ ಅಧಿಕಾರಿಯೂ ಆದೆ. ಕೃಷ್ಣರಾಯರ ಸೇವಾವಧಿಯಲ್ಲಿಯೇ ನನಗೆ ಮೂರು ಸಲ ಮುಂಬಡ್ತಿಗಳು ದೊರೆತವು. ಇದರಲ್ಲಿ ನನ್ನ ದಕ್ಷತೆ ಎಷ್ಟಿತ್ತೋ ನನಗೆ ತಿಳಿಯದು. ಆದರೆ ಕೃಷ್ಣರಾಯರ ಪ್ರೋತ್ಸಾಹ, ಪ್ರೇರಣೆ, ಹಾರೈಕೆ, ಆಶೀರ್ವಾದಗಳಂತೂ ಖಂಡಿತ ಇದ್ದೇ ಇದ್ದವು. ನನಗೆ ವರ್ಗಾವಣೆಗಳಾದ ಸಂದರ್ಭಗಳಲ್ಲಿ ಕೃಷ್ಣರಾಯರು ಸಹಾಯ ಮಾಡಿ ಉತ್ತಮ ಎಡೆಗಳಲ್ಲಿ ನೇಮಕವಾಗುವಂತೆ ಮಾಡಿದ್ದರು. ಅವರು ನಮ್ಮ ಬ್ಯಾಂಕಿನ ಅತ್ಯುನ್ನತ ಸ್ಥಾನವಾದ CMD ಪದವಿಗೇರಿ 1986ರಲ್ಲಿ ನಿವೃತ್ತಿಯನ್ನು ಹೊಂದಿದರು.


1998ರಲ್ಲಿ ನನಗೆ 2ನೇ ಬಾರಿಗೆ ಉತ್ತರ ಭಾರತಕ್ಕೆ ವರ್ಗಾವಣೆಯ ಆದೇಶ ಬಂತು. ನಾನಾಗಲೇ 36 ವರ್ಷಗಳ ಸೇವೆಯನ್ನು ಪೂರೈಸಿದ್ದು 5 ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಬಾಕಿ ಉಳಿದಿತ್ತು. ನನ್ನ ಈಗಿನ ಅನಾರೋಗ್ಯದ, ವಯಸ್ಸಿನ ಆಧಿಕ್ಯದ ದೃಷ್ಟಿಯಿಂದ ಅಲ್ಲಿಗೆ ಹೋಗಿ ಸಂಸ್ಥೆಗೆ ಉತ್ತಮ ಸೇವೆ ಕೊಡಲಾರೆನೆಂದು ಕಂಡು ಬಂದುದರಿಂದ ನಾನು ಸ್ವಯಂ ನಿವೃತ್ತಿ ಪಡೆದು ಕೊಂಡುಹೊರಗೆ ಬಂದೆ. ಅದಾದ ನಂತರ ನಾನು ಕೃಷ್ಣರಾಯರನ್ನು ಒಂದು ಸಲ ಅವರ ನಿವಾಸದಲ್ಲಿ ಭೇಟಿ ಮಾಡಿ ಸ್ವಯಂ ನಿವೃತ್ತಿ ಪಡೆದಿರುವುದನ್ನು ಹೇಳಿದೆ. ಆಗ ಅವರು ಮಾತಿನಲ್ಲಿ ಏನನ್ನೂ ಹೇಳದಿದ್ದರೂ, ಅವರ ಮುಖದಲ್ಲಿ ಸ್ವಲ್ಪ ಮಟ್ಟಿನ ಆತಂಕವನ್ನೂ "ಮೊದಲೇ ಹೇಳಿದ್ದರೆ ಏನಾದರೂ ಪ್ರಯತ್ನಿಸಬಹುದಿತ್ತು" ಎಂಬ ಭಾವವನ್ನೂ ಗುರುತಿಸಿದೆ. ಪರಹಿತವನ್ನೇ ಚಿಂತಿಸುವ ಕೃಷ್ಣರಾಯರಂತಹ ಸಂಸ್ಕಾರವಂತ, ಹೃದಯವಂತರಿಗೆ ಇದು ಸಹಜ ತಾನೇ?

ಕೃಷ್ಣರಾಯರು ಯಾರನ್ನೂ ಎಂದೂ ಟೀಕಿಸಿದವರಾಗಲೀ, ಯಾರ ಬಗೆಗೆಯೂ ಕೆಟ್ಟ ಮಾತುಗಳನ್ನಾಗಲೀ ಆಡಿದವರಲ್ಲ. ಆದರೆ ಹಲವು ಮಹನೀಯರು "ಕೃಷ್ಣರಾಯರು ನಮ್ಮ ಸಮಾಜಕ್ಕೆ ಏನನ್ನು ಮಾಡಿದ್ದಾರೆ?" ಎಂದು ಹಗುರವಾದ ಮಾತುಗಳನ್ನು ಹೇಳಿದ್ದುದನ್ನು ನಾನು ಕೇಳಿದ್ದೇನೆ. ಕೃಷ್ಣರಾಯರು ಉಡುಪಿಯಲ್ಲಿ "ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ"ವನ್ನು ಕಟ್ಟಿ ಅದರ ಸಂಸ್ಥಾಪಕರಾದರು; ಕುಂಜಿಬೆಟ್ಟಿನಲ್ಲಿ ಶಾರದಾ ಕಲ್ಯಾಣ ಮಂಟಪವನ್ನೂ ಶ್ರೀಶಾರದಾ ದೇವಸ್ಥಾನವನ್ನೂ ಸ್ಥಾಪಿಸಲು ಕಾರಣರಾದರು, ನಮ್ಮವರಿಂದ ನಡೆಸಲ್ಪಡುವ ಎರಡು ಕನ್ನಡ ಪತ್ರಿಕೆಗಳ ಹುಟ್ಟಿಗೂ ಪ್ರೇರಕರಾದರು; ದಶಕಗಳ ಹಿಂದೆ ಉಡುಪಿಯ ಇಬ್ಬರು ಮಠಾಧೀಶರು ನಮ್ಮ ಸಮಾಜದವರಿಗೆ ಸಹಪಂಕ್ತಿ ಭೋಜನವನ್ನು ಏರ್ಪಡಿಸುವಲ್ಲಿ ನೇತೃತ್ವವನ್ನು ವಹಿಸಿದರು;- ಇವೆಲ್ಲಾ ಇತಿಹಾಸಕ್ಕೆ ಸಂದ ಕ್ಲೀಷೆಯ ಮಾತುಗಳು. ಸ್ಥಾನಿಕ ಸಮಾಜ ಬಾಂಧವರಾದ ನಾವು ಇಂದು ಉಡುಪಿಯಲ್ಲಿ ತಲೆ ಎತ್ತಿ ನಿಲ್ಲುವಂತಾಗಿದ್ದರೆ, ಹೃದಯ ತುಂಬಿ ಶಾರದಾ ಕಲ್ಯಾಣ ಮಂಟಪಕ್ಕೆ ಭಕ್ತಿಯಿಂದ ಶ್ರೀಶಾರದಾ ದೇವಸ್ಥಾನಕ್ಕೆ ಹೋಗುವಂತಾಗಿದ್ದರೆ ಅದಕ್ಕೆ ಶ್ರೀ ಅಂಬಲಪಾಡಿ ಕೃಷ್ಣರಾಯರೂ ಅವರೊಂದಿಗೆ ಕೈಜೋಡಿಸಿ ಹಗಲಿರುಳೆನ್ನದೆ ದುಡಿದ, ಇಂದು ನಮ್ಮೊಡನಿಲ್ಲದ ಇದರ ಹಿರಿಯರೂ ಕಾರಣರು ಎಂಬುದನ್ನು ಮರೆಯದಿರೋಣ. ಸಮಾಜದ ಸಮಷ್ಟಿ ಹಿತವನ್ನು ಕಾಯ್ದವರ ನಮಿಸೋಣ.

ಕೃಷ್ಣರಾಯರಿಂದ ಉಪಕೃತರಾದವರು ನೂರಾರು ಜನರು ಈಗಲೂ ಇರಬಹುದು. ನನ್ನ ಹಾಗೆ ತಮ್ಮ ಅನುಭವಗಳನ್ನು ಪ್ರಕಟಪಡಿಸಲು ಅವರಿಗೆ ಬಾರದಿರಬಹುದು; ಅವಕಾಶಗಳೂ ದೊರಕದೆ ಇರಬಹುದು. ಆದರೆ ಕೃಷ್ಣರಾಯರು ತಮಗೆ ಏನೆಲ್ಲಾ ಮಾಡಿದ್ದಾರೆ ಎಂಬ ಸಂಗತಿಗಳು ಅವರ ಹೃದಯದಲ್ಲಿದ್ದರೆ ಅಷ್ಟೇ ಸಾಕು.

ನಾನು ದುಡಿದ "ಸಿಂಡಿಕೇಟ್ ಬ್ಯಾಂಕ್"ನಿಂದ ಈಗಲೂ ಸಾಕಷ್ಟು ನಿವೃತ್ತಿ ವೇತನವನ್ನು ಪಡೆಯುತ್ತಾ ನೆಮ್ಮದಿಯಾಗಿಯೇ ಇದ್ದೇನೆ. ಈ ಸಂಸ್ಥೆಯನ್ನು ಕಟ್ಟಿ ಬೆಳೆಸಿದ, ನನಗೆ ನೌಕರಿಯನ್ನಿತ್ತ ಶ್ರೀ ಟಿ.ಎ.ಪೈಯವರೂ, ಶ್ರೀ ಅಂಬಲಪಾಡಿ ಕೃಷ್ಣರಾಯರೂ ನನಗೆ ಇಂದಿಗೂ ಅನ್ನದಾತರು, ಪ್ರಾತಃ ಸ್ಮರಣೀಯರು ಹಾಗೂ ಆದರ್ಶಪ್ರಾಯರು. ●

## ಶ್ರದ್ಧಾಂಜಲಿ



15-07-1926 01-04-2010

**ಕೇದಿಗೆ ಭಾಸ್ಕರ ರಾವ್**


**ನಮ್ಮೆಲ್ಲರನ್ನು ಪ್ರೀತಿ ವಾತ್ಸಲ್ಯದಿಂದ ಸಲಹಿ ಉತ್ತಮ ಮಾರ್ಗದರ್ಶನಗೈದ ನಿಮ್ಮ ನೆನಪು ಸದಾ ಹಸಿರು. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸುವ**

ಲಕ್ಷ್ಮೀ ಭಾಸ್ಕರ ರಾವ್ (ಪತ್ನಿ)
ಗಾಯತ್ರಿ ಮತ್ತು ಡಾ. ಕೇದಿಗೆ ಅರವಿಂದ ರಾವ್
ರೂಪ ರಾಣಿ ಮತ್ತು ಕೇದಿಗೆ ವಸಂತ ರಾವ್
ರೇಖಾ ಮತ್ತು ಕೆ. ಜಯಂತ್ ರಾವ್
ರೇಖಾ ಮತ್ತು ರಾಜೇಂದ್ರ ಕೇದಿಗೆ
ಜ್ಯೋತಿ ಮತ್ತು ಕೆ. ಪ್ರತಾಪ್ ರಾವ್
ಗಾಯತ್ರಿ ಮತ್ತು ಸುಂದರೇಶ್ ಶರ್ಮ, ಬೆಂಗಳೂರು
ಕಮಲಜ ಮತ್ತು ರಾಜಶೇಖರ್, ಮೈಸೂರು
ಶಕುಂತಳ ಮತ್ತು ಡಾ. ಯಾಜಿ. ನಿರಂಜನ್ ಹೆಚ್. ಉಡುಪಿ
ರಾಜೇಶ್ವರಿ ಮತ್ತು ರಮಾನಂದ ರಾವ್, ಕುಡುಪು
ಮೊಮ್ಮಕ್ಕಳು ಮತ್ತು ಮರಿಮಕ್ಕಳು

**PRAMOD**
AUTOMOBILES
KARANGALPADY, MANGALORE -575 003.
Ph : 2491723 (0)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (0)
**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**
**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಅಗಲಿದ ಹಿರಿಯ ಚೇತನ ಕೆ. ಎಲ್. ರಾಮಕೃಷ್ಣ ರಾವ್



- ಪ್ರಸನ್ನಲಕ್ಷ್ಮೀ ರಾವ್, ಮಣಿಪಾಲ

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಮಾಜದ ಓರ್ವ ಹಿರಿಯ ಚೇತನ ಕೆ. ಎಲ್. ರಾಮಕೃಷ್ಣ ರಾವ್ ಅವರು ಬೆಂಗಳೂರಿನಲ್ಲಿರುವ ತಮ್ಮ ಸ್ವಗೃಹದಲ್ಲಿ ತಾ.28-2-2010ರಂದು ದೈವಾಧೀನರಾದರು. ಸರಳ ಸ್ವಭಾವದ ಸಮಾಜ ಸೇವಕ, ಕಾರ್ಮಿಕ ಮುಖಂಡ, ಚತುರ ವಾಗ್ಮಿ ಹಾಗೂ ಅನುಭವಿ ಪತ್ರಕರ್ತರಾಗಿದ್ದ ಇವರು ಪ್ರಚಾರ ಪ್ರಿಯರಲ್ಲ. ಎಲೆಮರೆಯ ಕಾಯಾಗಿದ್ದು ತನ್ನ ಶಕ್ತಿ ಮೀರಿ ಜನಸೇವೆಯಲ್ಲಿ ತೊಡಗಿಕೊಂಡ ಧೀಮಂತರು.

ಇವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಕೋಲ್ಪೆ ಮನೆತನದ ಶ್ರೀ ಲಕ್ಷ್ಮೀನಾರ್ಣಪ್ಪಯ್ಯ ಮತ್ತು ಶ್ರೀಮತಿ ಮೂಕಾಂಬಿಕೆಯವರ ಮಗನಾಗಿ ತಾ.27-9-1922ರಲ್ಲಿ ಜನಿಸಿದರು. ಪುತ್ತೂರಿನ ಕೊಡಿಪ್ಪಾಡಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆರಂಭಿಕ ಶಿಕ್ಷಣ ಪಡೆದ ಇವರು ತಮ್ಮ ತೀರ್ಥರೂಪರ ನಿಧನಾನಂತರ ಅಡೂರಿನ ಬೇನಾಡಿಯ ದಿ। ಶ್ರೀ ಜನಾರ್ಧನಯ್ಯನವರ ಆಶ್ರಯ ಹಾಗೂ ಮಾರ್ಗದರ್ಶನದಲ್ಲಿ ಸಂಸ್ಕೃತ, ಶ್ಲೋಕ, ವೇದಮಂತ್ರಗಳಲ್ಲಿ ಅಭ್ಯಾಸ ನಡೆಸಿ ಪರಿಣತಿ ಪಡೆದುಕೊಂಡರು. 1936ರಲ್ಲಿ ಸ್ವತಂತ್ರ ಜೀವನದ ಹಂಬಲದಿಂದ ಮೈಸೂರಿಗೆ ತೆರಳಿ ಹೋಟೇಲೊಂದರಲ್ಲಿ ಉದ್ಯೋಗಕ್ಕೆ ಸೇರಿ ಕೊಂಡರು.

ಆ ಸಮಯದಲ್ಲಿ ಹೋಟೆಲ್ ಕಾರ್ಮಿಕರು ಅನೇಕ ವಿಧಗಳಲ್ಲಿ ಶೋಷಣೆಗೊಳಗಾಗುವುದನ್ನು ಕಂಡು ಕಾರ್ಮಿಕರ ಸಂಘ ಕಟ್ಟುವ ಪ್ರಯತ್ನ ಮಾಡಿದರು. 'ಶೋಷಣೆ' ಆ ಕಾಲದ ಪ್ರಚಲಿತ ವಿದ್ಯಮಾನವಾಗಿತ್ತು. ಉಳ್ಳವರು-ಇಲ್ಲದವರ ಮಧ್ಯೆ, ಜಮೀನ್ದಾರರು-ರೈತಾಪಿ ಜನರ ಮಧ್ಯೆ, ಮಾಲಕರು-ಕಾರ್ಮಿಕರ ನಡುವೆ ಮೌನ ಯುದ್ಧ ನಡೆಯುತ್ತಲೇ ಇತ್ತು. ದೇಶದಲ್ಲಿ ಸ್ವಾತಂತ್ರ್ಯ ಸಮರ ಬಲಗೊಂಡ ದಿನಗಳವು. ರಾಮಕೃಷ್ಣ ರಾಯರು ಕಾರ್ಮಿಕ ಸಂಘಟನೆ ಮಾಡುವುದಕ್ಕೆ ಹೊಟೇಲ್ ಮಾಲೀಕರ ತೀವ್ರ ವಿರೋಧ, ಆಕ್ಷೇಪಣೆ ವ್ಯಕ್ತವಾಗಿ ರಾಮಕೃಷ್ಣ ರಾಯರು ಮೈಸೂರು ತೊರೆದು 1941ರಲ್ಲಿ ಬೆಂಗಳೂರಿಗೆ ಬಂದು ನೆಲೆಸು ವಂತಾಯಿತು. ಅಲ್ಲಿಯೂ ನಡೆಯುತ್ತಿದ್ದ ಕಾರ್ಮಿಕರ ಶೋಷಣೆಯನ್ನು ಕಂಡ ಅವರು ಕಾರ್ಮಿಕರನ್ನು ಸಂಘಟಿಸುವ ದೃಢ ನಿರ್ಧಾರ ತಳೆದರು. ತಾ.14-9-1944ರಲ್ಲಿ ರಾಮಕೃಷ್ಣ ರಾಯರ ನಾಯಕತ್ವದಲ್ಲಿ ಮೊದಲಬಾರಿಗೆ ಬೆಂಗಳೂರಿನಲ್ಲಿ ಒಂದು ಕಾರ್ಮಿಕ ಸಂಘದ ರಚನೆಯಾಯಿತು. ಹಲವಾರು ಇತರ ಕಾರ್ಮಿಕ ನಾಯಕರ ಸಹಕಾರ ಹಾಗೂ ಮಾರ್ಗದರ್ಶನ ದೊರೆಯಿತು. ಕಾರ್ಮಿಕ ಮುಖಂಡರಾಗಿ, ಕಾರ್ಮಿಕರ ಹಿತರಕ್ಷಣೆಗಾಗಿ ಮುಷ್ಕರ ಹಾಗೂ ಚಳುವಳಿಗಳನ್ನು ನಡೆಸಿ ಹಲವುಬಾರಿ ಸೆರೆವಾಸವನ್ನೂ ಅನುಭವಿಸಿದರು. ಆ ಹೋರಾಟದ ದಿನಗಳಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಾರ್ಮಿಕ ಸಮ್ಮೇಳನಗಳಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಹಲವು ಬೃಹತ್ ಸಮ್ಮೇಳನಗಳಲ್ಲಿ ದಿಕ್ಸೂಚಿ ಭಾಷಣಕಾರರಾಗಿದ್ದರು. ಅವರ ಈ ಕಾರ್ಯ ಕ್ಷೇತ್ರವು ಇತರ ಕಾರ್ಮಿಕ ಕ್ಷೇತ್ರಗಳಿಗೂ ಬೆಳೆದು ಅವರೊಬ್ಬ ಜನಪ್ರಿಯ ಕಾರ್ಮಿಕ ನೇತಾರರಾದರು. ಸ್ವಾತಂತ್ರ್ಯ ಹೋರಾಟದಲ್ಲೂ ಭಾಗಿಯಾದರು. 1953ರಲ್ಲಿ ಬೆಂಗಳೂರು ನಗರಸಭೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಚುನಾಯಿತರಾಗಿದ್ದ ಅವರು ತಮ್ಮದೇ ಆದ ಮುದ್ರಣಾಲಯವೊಂದನ್ನು ಸ್ಥಾಪಿಸಿದ್ದಲ್ಲದೇ ತನ್ನದೇ ಸಂಪಾದಕತ್ವದಲ್ಲಿ ಕಾರ್ಮಿಕ ಹೋರಾಟಕ್ಕೆ ಮುಖವಾಣಿಯಾಗಿ 'ಜನಜಾಗೃತಿ' ಎಂಬ ವಾರಪತ್ರಿಕೆಯನ್ನು 1956ರಲ್ಲಿ ಪ್ರಕಟಿಸ ಲಾರಂಭಿಸಿದರು. ಅದು ಇತ್ತೀಚಿನವರೆಗೂ ಪ್ರಕಟವಾಗುತ್ತಿತ್ತು. 1990ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿಯು ಅವರನ್ನು ಸನ್ಮಾನಿಸಿತ್ತು. ಅವರ ಸುದೀರ್ಘ ಅನುಭವ ಹಾಗೂ ಕಾರ್ಮಿಕ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರವು ಅವರನ್ನು ಕಾರ್ಮಿಕ ವೇತನ ಪರಿಷ್ಕರಣ ಮಂಡಳಿಗೆ ಸದಸ್ಯರನ್ನಾಗಿ ನೇಮಿಸಿತ್ತು. ತಾ.15-8-1997ರಂದು ಬೆಂಗಳೂರಿನ ಮಹಾನಗರಪಾಲಿಕೆಯು ಸ್ವಾತಂತ್ರ್ಯದ ಸುವರ್ಣೋತ್ಸವದ ದಿನಾಚರಣೆ ಸಂದರ್ಭದಲ್ಲಿ ಮಾಜಿ ನಗರಸಭಾ ಸದಸ್ಯರನ್ನು, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಸೆರೆವಾಸ ಅನುಭವಿಸಿದ್ದಕ್ಕಾಗಿ ಸನ್ಮಾನಿಸಿತ್ತು. ಆಗ ಶ್ರೀಯುತ ರಾಮಕೃಷ್ಣರಾಯರಿಗೆ ಬೆಳ್ಳಿಯ ಪಾರಿತೋಷಕ ವನ್ನಿತ್ತು ನಗರಪಾಲಿಕೆಯು ಗೌರವಿಸಿತ್ತು.

ಇವರು ಸ್ಥಾನಿಕ ಸಮಾಜದ ಏಳಿಗೆಗಾಗಿಯೂ ಶ್ರಮಿಸಿದ್ದರು. ಬೆಂಗಳೂರಿನಲ್ಲಿದ್ದ ನಮ್ಮ ಸಮಾಜದ ಮುಖಂಡರನ್ನು ಒಗ್ಗೂಡಿಸಿ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಮಹಾಸಭೆಯ ಸಾಂವಿಧಾನಿಕ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದರು. ರಾಜ್ಯ ಮಟ್ಟದ ಅಖಿಲ ಕರ್ನಾಟಕ ಬ್ರಾಹ್ಮಣ ಸಭೆಯ ಸಕ್ರಿಯ ಸದಸ್ಯರಾಗಿ ಸಮಾಜ ಸೇವೆ ಮಾಡಿದರು. ಇವರ ಅಪೂರ್ವ ವ್ಯಕ್ತಿತ್ವ ಮತ್ತು ಸೇವಾ ಮನೋಭಾವವನ್ನು ಗುರುತಿಸಿ ಹಳೆಯಂಗಡಿಯ ವೇದಮೂರ್ತಿ ನಾರಾಯಣ ಭಟ್ ಮೆಮೋರಿಯಲ್ ಟ್ರಸ್ಟ್ 2003ರಲ್ಲಿ ಶ್ರೀ ಶಂಕರ ಜಯಂತಿಯ ಶುಭಾವಸರದಲ್ಲಿ ಅವರನ್ನು ಸನ್ಮಾನಿಸಿತ್ತು.

ಶ್ರೀಯುತರ ವೈವಾಹಿಕ ಜೀವನವೂ ಆದರ್ಶ ಪೂರ್ಣವಾಗಿತ್ತು. ಬೊಳ್ಳೂರಿನ ಶ್ರೀ ಅನಂತ ರಾವ್ ಹಾಗೂ ಶ್ರೀಮತಿ ವೆಂಕಮ್ಮ ಅವರ ಪುತ್ರಿ ರತ್ನಮ್ಮ ನವರೊಡನೆ ತಾ.13-12-1953ರಲ್ಲಿ ಅವರ ವಿವಾಹವಾಯಿತು. ಒಬ್ಬ ಪುತ್ರಿ ಹಾಗೂ ಇಬ್ಬರು ಪುತ್ರರನ್ನು ಪಡೆದು ತುಂಬು ಸಂಸಾರ ನಡೆಸಿದ ಇವರು ವಿನಯಶೀಲತೆ, ದಕ್ಷತೆ, ಕಾರ್ಯತತ್ಪರತೆ ಮತ್ತು ಪ್ರೀತಿ ವಾತ್ಸಲ್ಯಗಳಿಂದ ಜನಪ್ರಿಯರಾಗಿದ್ದರು. ಇವರ ಪುತ್ರಿ ಶ್ರೀಮತಿ ರಾಜಲಕ್ಷ್ಮೀ ಶೇಖರ್ ಮುಂಬಯಿಯಲ್ಲಿ ನೆಲೆಸಿದ್ದಾರೆ. ಪುತ್ರರಾದ ಶ್ರೀ ಕೆ. ಆರ್. ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಕೆ. ಆರ್. ಸುಬ್ರಹ್ಮಣ್ಯ ರಾವ್ ಇವರು ಬೆಂಗಳೂರಿನಲ್ಲಿ ಜನಪ್ರಿಯ ವಕೀಲರಾಗಿದ್ದಾರೆ.

ಶ್ರೀಯುತ ರಾಮಕೃಷ್ಣರಾಯರ ನಿಧನದಿಂದ ಸ್ಥಾನಿಕ ಸಮಾಜದ ಒಂದು ಅಪೂರ್ವ ಚೇತನವು ಮರೆಯಾಗಿದೆ. ಇವರ ಆತ್ಮಕ್ಕೆ ಭಗವಂತನು ಸದ್ಗತಿಯನ್ನೀಯಲೆಂದು ಪ್ರಾರ್ಥಿಸೋಣ.

# ಕಾರ್ಕಳ ಜೋಗುಳಬೆಟ್ಟು ಶ್ರೀರಾಮಧಾಮ ಧ್ಯಾನಮಂದಿರ ಪ್ರತಿಷ್ಠಾಪನಾ ದಿನ ಹಾಗೂ ರಾಮನವಮಿ ಆಚರಣೆ

ವರದಿ : ಜಿ.ಕೆ.ಕೋಲ್ಪೆ, ಕಡಬ

ತಾರೀಕು 23-02-2010ರಂದು ''ಶ್ರೀರಾಮಧಾಮ'' ಧ್ಯಾನಮಂದಿರದಲ್ಲಿ ದ್ವಿತೀಯ ಪ್ರತಿಷ್ಠಾಪನಾ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಪಾವಂಜೆ ಬ್ರಹ್ಮಶ್ರೀ ವಾಗೀಶಶಾಸ್ತ್ರಿಯವರು ಮಾರ್ಗ ದರ್ಶನದಂತೆ, ಪುರೋಹಿತ ಕಬ್ಬಿನಾಲೆ ದೇವರಾಜ ಹೆಬ್ಬಾರ್, ಪಾವಂಜೆ ಇವರ ನೇತೃತ್ವದಲ್ಲಿ ಸಹ ಪುರೋಹಿತರುಗಳಾದ ಎಮ್.ಸುಬ್ರಹ್ಮಣ್ಯ ಭಟ್, ಪಾವಂಜೆ ಹಾಗೂ ಹೆಜಮಾಡಿ ಕೃಷ್ಣರಾಜಭಟ್‌ರವರ ಸಹಕಾರ 'ದೊಂದಿಗೆ, ಮೊದಲು ಶುದ್ಧ ಪುಣ್ಯಾಹ, ಗಣಹೋಮ ಮತ್ತು ರುದ್ರಾಭಿಷೇಕ ನಡೆಯಿತು. ಮಹಾಪೂಜೆಗೆ ಮೊದಲು ಕೋಲೆ ಗೋಪಾಲಕೃಷ್ಣರಾಯರು ಸಂಗ್ರಹಿಸಿದ ಶ್ರೀರಾಮ ಸಪ್ತಚತ್ವಾಹಿಶನ್ಮಂತ್ರ ಮತ್ತು ಪಂಚರತ್ನ ಸ್ತೋತ್ರಗಳು ಎಂಬ ಕಿರುಹೊತ್ತಿಗೆ ಯನ್ನು ಶುಂಠಿಪಾಡಿ ಶ್ರೀ ಮನೋಹರರಾವ್, ನಿವೃತ್ತ ಪ್ರಾಧ್ಯಾಪಕರು ಹಾಗೂ ಅವರ ಶ್ರೀಮತಿ ಸಾವಿತ್ರಿ ಮನೋಹರ ರಾವ್, ಪ್ರೌಢಶಾಲಾ ನಿವೃತ್ತ ಮುಖ್ಯೋಪಾಧ್ಯಾಯರು ಹಾಗೂ ರಾಜ್ಯ ಪ್ರಶಸ್ತಿ ವಿಜೇತ ಲೇಖಕಿ, ಬಿಡುಗಡೆಗೊಳಿಸಿ ಸಂದರ್ಭೋಚಿತವಾಗಿ ಮಾತನಾಡಿದರು. ಆ ಕೃತಿಯಲ್ಲಿರುವ 47 ಮಂತ್ರಗಳನ್ನು ಪಠಿಸಿದ ನಂತರ ಶ್ರೀರಾಮ ದೇವರಿಗೆ ವಿಶೇಷ ಮಹಾಪೂಜೆ ನಡೆಯಿತು. ತದನಂತರ ಭಕ್ತಾದಿಗಳಿಗೆ ಪ್ರಸಾದ ಭೋಜನ ಏರ್ಪಡಿಸ ಲಾಯಿತು. ಸಾಯಂಕಾಲ ಶ್ರೀಶಾರದಾ ಭಜನಾ ಮಂಡಳಿ, ಅನಂತಶಯನದ ಮಹಿಳಾ ಸದಸ್ಯರು ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ರಾತ್ರಿ ದುರ್ಗಾನಮಸ್ಕಾರ ಪೂಜೆಯೊಂದಿಗೆ ಮೊದಲದಿನದ ಕಾರ್ಯಕ್ರಮ ಸಂಪನ್ನಗೊಂಡಿತು.

ಮೂರನೇ ದಿನ ತಾರೀಕು 24ರಂದು, ಶ್ರೀರಾಮ ನವಮಿಯನ್ನು ಪುಣ್ಯಾಹ, ''ಶ್ರೀವೀರರಾಮ ಹೋಮ''ದೊಂದಿಗೆ ಪ್ರಾರಂಭಿಸಿ, ಮಧ್ಯಾಹ್ನಕ್ಕೆ ಸಹಸ್ರಾರ್ಚನೆ ಸಹಿತ ಸಪರಿವಾರ ಶ್ರೀರಾಮ ದೇವರಿಗೆ ಮಹಾಪೂಜೆ ನೆರವೇರಿಸಲಾಯಿತು. ಪುರೋಹಿತರುಗಳಾದ ಬೆಳ್ಳೆ ಅರವಿಂದ ಶರ್ಮ, ಪಾವಂಜೆ ಮತ್ತು ಕಿಗ್ಗ ನಾಗಭೂಷಣ ಶಾಸ್ತ್ರೀ, ಕೋರಿಕೆಬೆಟ್ಟು, ಮುಂಡ್ಕೂರುರವರು ಈ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ಕೋಲ್ಪೆ ಬಂಧುಗಳನ್ನು ಹರಸಿದರು. ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಧ್ಯಾನಮಂದಿರದ ರೂವಾರಿ ಶಶಿಧರ ರಾವ್ ಕೋಲ್ಪೆಯವರ ಉಸ್ತುವಾರಿಯಲ್ಲಿ ಕಾರ್ಯ ಕ್ರಮ ನಿರ್ವಿಘ್ನವಾಗಿ ನೆರವೇರಿತು.

## ಓಂ ಈಶಾವಾಸ್ಯಮ್ ಗುರುಕುಲ, ಬೆಂಗಳೂರು

**(ವೇದಪಠಣ ಕಲಿಯುವ ಆಸಕ್ತರ ಗಮನಕ್ಕೆ)**

ಬೆಂಗಳೂರು ಮಹಾನಗರದಲ್ಲಿ ವೇದಾಧ್ಯಯನದ ಉಚಿತ ತರಗತಿಗಳನ್ನು ನಡೆಸಲು ಪ್ರಕೃತ ಸ್ಥಳಾವಕಾಶವನ್ನು ಒದಗಿಸುತ್ತಿರುವ 'ಗುರುಕುಲ ಪೋಷಕ'ರ ವಿವರ, ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು :


1) **ಪ್ರತಿ ಭಾನುವಾರ (ಪ್ರಾತಃ 6-15ರಿಂದ 8-15ರ ವರೆಗೆ)**
ಕಮಲಾನಗರ ನಿವಾಸಿ, ಶ್ರೀಮತಿ ಡಾ। ರೇಣುಕಾ ಮತ್ತು ಶ್ರೀ ಸುರೇಂದ್ರ ವೆ.ಎಸ್‌ರವರ ಸ್ವಗೃಹ. ದೂ. : 23484823, ಮೊ : 9986008011

2) **ಪ್ರತಿ ಶನಿವಾರ (ಸಾಯಂ 3-15ರಿಂದ 6-15ರ ವರೆಗೆ)**
ರಾಜಾಜಿನಗರ 3ನೇ ಬ್ಲಾಕ್ ರಾಮಮಂದಿರ ಸಮೀಪ ಶ್ರೀಮತಿ ಕಲ್ಯಾಣಿ ಬಿ.ಎ.ರಾವ್‌ರವರ ಸ್ವಗೃಹ. ದೂ. : 23151929

(ಗುರುಕುಲ ಪ್ರಕಟಣೆ)

ಜಿ.ಕೆ.ರಾವ್, ಗುರುಕುಲ ಅಧ್ಯಾಪಕರು
ದೂ. : 23230992, ಮೊ. : 9448206073

## ನಿಧನ



### ಕೆ. ಸುಬ್ಬರಾವ್

ಪಂಜಿಮೊಗರಿನಲ್ಲಿ ವಾಸವಾಗಿದ್ದ ಕೆ. ಸುಬ್ಬರಾಯರು ತಾ.9-3-2010ರಂದು ತಮ್ಮ ಸ್ವಗೃಹ ''ಓಂಕಾರ ಸದನ''ದಲ್ಲಿ ಅಸೌಖ್ಯದಿಂದ ನಿಧನರಾದರು. ಮರಣಕಾಲಕ್ಕೆ ಅವರಿಗೆ 78 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಗಡಿನಾಡಿನ ಹೆಸರಾಂತ ***'ಕನ್ನಡದ ಗುರು'*** ಎಂಬ ಗೌರವಕ್ಕೆ ಪಾತ್ರರಾದ ದಿ। ಪೆರಡಾಲ ಕೃಷ್ಣಯ್ಯ ಹಾಗೂ ದಿ। ಗೌರಮ್ಮ ದಂಪತಿಗಳ ದ್ವಿತೀಯ ಪುತ್ರರಾಗಿ 1933ರಲ್ಲಿ ಜನಿಸಿದ ಕೆ. ಸುಬ್ಬರಾಯರು ನೀರ್ಚಾಲಿನ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಕನ್ನಡದಲ್ಲಿ ವಿದ್ವಾನ್ ಪದವಿಯನ್ನು ಪಡೆದು ಕಿನ್ನಿಗೋಳಿ ಪಾಂಪೈ ಹೈಸ್ಕೂಲಿನಲ್ಲಿ 10 ವರ್ಷ, ಮಿಲಿ ಪದವು ಶ್ರೀ ವಿದ್ಯಾವರ್ಧಕ ಹೈಸ್ಕೂಲಿನಲ್ಲಿ 18 ವರ್ಷ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿ ಸಹಸ್ರಾರು ವಿದ್ಯಾರ್ಥಿಗಳಿಗೆ ಜ್ಞಾನಧಾರೆ ಎರೆದ ಅಕ್ಕರೆಯ ಗುರುವಾಗಿದ್ದರು. ಸ್ವತಃ ನಟರಾಗಿದ್ದ ದಿವಂಗತರು ಹಲವು ಕನ್ನಡ ನಾಟಕಗಳಿಗೆ ನಿರ್ದೇಶನ ಮಾಡಿದ್ದಾರೆ. ಹಲವಾರು ಕಥೆ, ಕವನಗಳನ್ನು ಬರೆದ ಕೀರ್ತಿ ಇವರದು.

### ಕೇದಿಗೆ ಭಾಸ್ಕರ್ ರಾವ್

ಮಂಗಳೂರು: ಬಂಟ್ವಾಳ ತಾಲೂಕು, ದೇವಶ್ಯಪಡೂರು ಗ್ರಾಮದ ಕೇದಿಗೆ ಕುಟುಂಬದ ಹಿರಿಯ ವ್ಯಕ್ತಿಯಾದ ಕೇದಿಗೆ ಭಾಸ್ಕರ್ ರಾವ್ ಅವರು (85) ಅಲ್ಪ ಕಾಲದ ಅಸೌಖ್ಯದಿಂದ, ಅವರ ಹಿರಿಯ ಪುತ್ರ ಡಾ. ಕೇದಿಗೆ ಅರವಿಂದ ರಾವ್ ಅವರ ಮಂಗಳೂರಿನ ಸ್ವಗೃಹದಲ್ಲಿ ಎಪ್ರಿಲ್ 1ನೇ ತಾರೀಕಿನಂದು ಸ್ವರ್ಗಸ್ಥರಾದರು. ಅವರು 60ರ ದಶಕದಲ್ಲಿ ಹಲವು ಆಧ್ಯಾತ್ಮದ ಬಗ್ಗೆ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದರು ಹಾಗೂ ಕೃಷಿಕರಾಗಿದ್ದರು. ಅವರು ಪತ್ನಿ, ಐವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ನಿರಂಜನ ಶರ್ಮ

ಆದ್ಯಪಾಡಿ ದಿ। ಸೀತಾರಾಮ ಶರ್ಮರ ಪುತ್ರ ಶ್ರೀ ನಿರಂಜನ ಶರ್ಮ ಅವರು ಅಲ್ಪಕಾಲದ ಅಸೌಖ್ಯದಿಂದ ಆದ್ಯಪಾಡಿಯ ಸ್ವಗೃಹದಲ್ಲಿ ತಾ.3-3-2010ರಂದು ನಿಧನರಾದರು. ಅವರಿಗೆ 60 ವರ್ಷ ಪ್ರಾಯವಾಗಿದ್ದು ತಾಯಿ, ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

### ನಾರಾಯಣ ರಾವ್ ಬಿ.ಕೆ.

ಬೆಳ್ತಂಗಡಿ ತಾಲೂಕಿನ ಕಿಲ್ಲೂರಿನಲ್ಲಿ ವಾಸ್ತವ್ಯದಲ್ಲಿದ್ದ ದಿವಂಗತ ನಾರಾಯಣ ರಾವ್ ಬಿ.ಕೆ. ಇವರ ಪತ್ನಿ ಶ್ರೀಮತಿ ಶಾಂತಾ ದೇವಿಯವರು ಅಲ್ಪಕಾಲದ ಅಸೌಖ್ಯದಿಂದ ತಾ.26-3-2010ರಂದು ತಮ್ಮ 82ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಇವರು ಪುತ್ರ, ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.


*ನಮ್ಮಲ್ಲಿ ಹೋಮ, ಹವನ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.*

**ಸಂಪರ್ಕಿಸಿರಿ :**

**ಕೆ. ರಾಮಮೂರ್ತಿ ಭಟ್, ಪುರೋಹಿತರು**

**ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010**

# "ಹರಿಕಥೆ" ಅಪೇಕ್ಷಿತವೇ? ಅನಪೇಕ್ಷಿತವೇ?-೨



ಹರಿದಾಸ ಮ.ನಾ.ಹೆಬ್ಬಾರ,
ಎಂ.ಎ., ಬಿ.ಎಡ್.

ಧರ್ಮಪ್ರಸಾರಕ್ಕೆ, ಪುರಾಣದ ಕಥೆಗಳ ವಿವರಣೆಗೆ, 'ಹರಿಕಥೆ'ಯಷ್ಟು ಉತ್ತಮವಾದ ಮಾಧ್ಯಮ ಬೇರೊಂದಿಲ್ಲ. ಇದರ ಮೂಲಕ ಸಾಹಿತ್ಯ, ಸಂಗೀತ ಇತ್ಯಾದಿಗಳನ್ನು ನಾವು ಜನರಿಗೆ ಒದಗಿಸಬಹುದು. ಇದು ಸಾಮಾನ್ಯವಾಗಿ ಏಕ ಪಾತ್ರಾಭಿನಯವಾಗಿರುತ್ತದೆ. ಹರಿಕಥೆಯನ್ನು ಮಾಡುವ ವ್ಯಕ್ತಿಯು ಒಬ್ಬನೇ ಆಗಿದ್ದು ಇಲ್ಲಿ ಸಂಭಾಷಣೆಗಾಗಲೀ, ಬೇರೊಬ್ಬರ ಮಾತಿಗಾಗಲೀ ಅವಕಾಶವಿಲ್ಲ. ಸಂಗೀತವನ್ನು ಪ್ರಸ್ತುತಪಡಿಸುತ್ತಾ ಕಥೆಯನ್ನು ನಡೆಯಿಸುವುದರಿಂದ ಪಕ್ಕವಾದ್ಯ ಇದಕ್ಕೆ ಅವಶ್ಯಕ. ಹಾರ್ಮೋನಿಯಂ, ಪಿಟೀಲು ಯಾ ವೀಣೆ, ತಬಲಾ ಯಾ ಮೃದಂಗ ಇತ್ಯಾದಿ ವಾದನ ಸಾಮಗ್ರಿ ಮತ್ತು ವಾದಕರ ಅವಶ್ಯಕತೆ ಇದಕ್ಕಿದೆ. ಇಂತಹ ವಾದ್ಯಗಳ ವಾದನವಿಲ್ಲದೇ ಹರಿದಾಸರು ಹರಿಕಥೆಯನ್ನು ಪ್ರಸ್ತುತ ಪಡಿಸಲಾರರು. ಅವರಿಗೆ ಸಂಗೀತ ಜ್ಞಾನ ಅತ್ಯಂತ ಅವಶ್ಯಕ. ಇದರ ಜೊತೆಗೆ ಪುರಾಣದ ಕಥೆಗಳ ವಿಶಾಲವಾದ ಅನುಭವ ಅಗತ್ಯವಾಗಿರಬೇಕು. ಕಥೆಯನ್ನು ಹೇಳುತ್ತಿರುವಾಗ ತತ್ಕಾಲೀನ ರಾಜಕೀಯ, ಸಾಮಾಜಿಕ ವಿವರಣೆಯನ್ನು ಕೊಡುತ್ತಾ ಅವುಗಳನ್ನು ಸಂಬಂಧಿತ ಘಟನೆ ಯಾ ಕಥೆಗಳ ಮೂಲಕ ಪ್ರಸ್ತುತ ಪಡಿಸುವುದರಿಂದ ಪ್ರೇಕ್ಷಕ ವರ್ಗಕ್ಕೆ ಮನೆರಂಜನೆಯೂ ಉಂಟಾಗುತ್ತದೆ. ಹರಿದಾಸರಾದವರು ಕೇವಲ ಶುಷ್ಕವಾದ ಕಥೆಯನ್ನು ಮಾತ್ರವೇ ಹೇಳದೆ ಮಧ್ಯೆ ಮಧ್ಯೆ ಹಾಸ್ಯ ಚಟಾಕಿ, ಉಪಕಥೆ ಇತ್ಯಾದಿಗಳನ್ನು ಪ್ರಸ್ತುತಪಡಿಸುತ್ತಿರುವುದರಿಂದ ಪ್ರೇಕ್ಷಕರನ್ನು ತನ್ನೆಡೆಗೆ ಆಕರ್ಷಿಸುವುದು ಮಾತ್ರವಲ್ಲದೆ ಕಥೆಯು ಮುಗಿಯುವ ತನಕ ಹಿಡಿದಿಟ್ಟುಕೊಳ್ಳಲೂ ಸಾಧ್ಯ. ಅದಿಲ್ಲವಾದರೆ ಒಬ್ಬ ಹರಿದಾಸನು ಯಶಸ್ವೀ ಹರಿದಾಸನೆನಿಸಲಾರನು.

ಸಂಗೀತ, ಹಾಸ್ಯ ಸನ್ನಿವೇಶ ಮತ್ತು ಉಪಕಥೆಗಳ ಜತೆಗೆ ಭಾಷೆ ಮತ್ತು ಸಾಹಿತ್ಯಗಳ ವಿಶಾಲ ಅನುಭವವು ಹರಿದಾಸರಿಗಿರಬೇಕು. ಭಾಷೆಯು ಅತ್ಯಂತ ಶುದ್ಧವಾಗಿದ್ದು, ಅಲಂಕಾರಿಕವಾದ, ಪಂಡಿತ-ಪಾಮರರೆಲ್ಲರನ್ನೂ ಆಕರ್ಷಿಸಬಲ್ಲ ಮಾತುಗಾರಿಕೆ ಹರಿದಾಸರಿಗೆ ಅವಶ್ಯಕ. ತಾನು ಹರಿಕಥೆ ನಡೆಯಿಸುತ್ತಿರುವ ಪ್ರದೇಶದ ಭಾಷಾ ಪ್ರಭೇದದ ಅನುಭವ ಹರಿದಾಸರಿಗಿದ್ದರಂತೂ ಅತ್ಯಂತ ಪರಿಣಾಮಕಾರಿ. ಉದಾಹರಣೆಗೆ ಕನ್ನಡ ನಾಡಿನ ವಿವಿಧ ಕಡೆಗಳಲ್ಲಿ ವಿವಿಧ ರೀತಿಯ ಶಬ್ದ ಪ್ರಯೋಗ ಮತ್ತು ಭಾಷಾ ಶೈಲಿಯಿರುತ್ತದೆ. ಅದನ್ನು ಅಲ್ಲಲ್ಲಿ ಪ್ರಯೋಗಿಸಿದರೆ ಜನರನ್ನು ರಂಜಿಸಬಹುದು. ಇನ್ನು ತುಳು, ಕೊಂಕಣಿ, ಕೊಡವ ಇತ್ಯಾದಿ ಉಪಭಾಷೆಗಳು ಆಯಾ ಪ್ರದೇಶಗಳಲ್ಲಿ ಬಳಕೆಯಲ್ಲಿರುವುದರಿಂದ ಅವುಗಳನ್ನು ಅಲ್ಲಲ್ಲಿ ಪ್ರಯೋಗಿಸುವುದರಿಂದ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ತಾನು ಪ್ರಸ್ತುತ ಪಡಿಸುತ್ತಿರುವ ವಿಷಯವು ಪ್ರೇಕ್ಷಕರಿಗೆ ಪರಿಣಾಮಕಾರಿಯಾಗಿ ತಲುಪುತ್ತಿದೆಯೇ, ಅವರು ಅದರಲ್ಲಿ ಹೆಚ್ಚಿನ ಆಸಕ್ತಿ ತಳೆಯುತ್ತಿದ್ದಾರೆಯೇ ಎಂಬುದನ್ನು ಪ್ರೇಕ್ಷಕರ ಪ್ರತಿಕ್ರಿಯೆಯಿಂದಲೇ ಅರ್ಥವಿಸಿಕೊಂಡು ಅದಕ್ಕನುಗುಣವಾಗಿ ಪ್ರೇಕ್ಷಕರನ್ನು ರಂಜಿಸುವಂತೆ ತನ್ನ ವಿಷಯ ಮತ್ತು ಮಾತುಗಾರಿಕೆಯಿರಬೇಕೆಂಬುದನ್ನು ಹರಿದಾಸರು ತಿಳಿದಿರಬೇಕು. ಕಥೆಯು ಹರನನ್ನೋ, ಗಿರಿಜೆಯನ್ನೋ, ಗಣಪತಿಯನ್ನೋ ಅಥವಾ ಇತರ ಯಾವುದೇ ದೇವತೆಗಳನ್ನು ಕುರಿತಾಗಿದ್ದರೂ ಅದನ್ನು 'ಹರಿಕಥೆ'ಯೆಂದೇ ಹೇಳುವುದು ಸಮಾಜದಲ್ಲಿ ರೂಢಿಯಾಗಿದೆ. ಇತ್ತೀಚೆಗೆ ಚಾರಿತ್ರಿಕ, ಸಾಮಾಜಿಕ, ಜಾನಪದ ವಿಷಯಗಳನ್ನು ಕುರಿತು 'ಹರಿಕಥೆ'ಗಳನ್ನು ಪ್ರಸ್ತುತ ಪಡಿಸಲಾಗುತ್ತಿದೆ. ಅವುಗಳ ಕುರಿತಾದ ವಿಸ್ತೃತ ವಿವರಣೆಯನ್ನು ಮುಂದೆ ನೋಡೋಣ.

(ಮುಂದುವರಿಯುವುದು)

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಈ ಗ್ರಂಥಗಳನ್ನು ವಿಮರ್ಶೆಗೆ ಗುರಿಪಡಿಸುವಾಗ ನಮಗೆ ಈ ಕೆಳಗಿನ ಸತ್ಯ ಸಂಗತಿಗಳ ಕಡೆಗೆ ಗಮನ ಹರಿಸಬೇಕಾಗುತ್ತದೆ.

1) ಕದಂಬ ಕುಲವು ಸೂರ್ಯವಂಶದ ಕ್ಷತ್ರಿಯ ಕುಲಕ್ಕೆ ಸೇರಿದ್ದೆಂಬುದಾಗಿ ಈ ಗ್ರಂಥಗಳು ತಿಳಿಸುತ್ತವೆ. ಆದರೆ ಈ ಕದಂಬ ವಂಶೀಯರು ಕ್ಷತ್ರಿಯರಲ್ಲವೆಂದೂ ಈ ರಾಜಕುಟುಂಬದ ರಾಜ್ಯಸ್ಥಾಪಕನಾದ ಮಯೂರವರ್ಮನು ಮಾನವ್ಯಗೋತ್ರದ ಬ್ರಾಹ್ಮಣನೆಂದೂ ಶಾಸನದಿಂದಲೂ, ಚರಿತ್ರೆಯ ವಿಮರ್ಶೆಯಿಂದಲೂ ತಿಳಿದುಬರುತ್ತದೆ. ಶಾಸನಗಳನ್ನು ಪರಿಶೀಲಿಸಿದರೆ ಇನ್ನೂ ಒಂದು ಸಂಗತಿಯು ಬಯಲಿಗೆ ಬರದಿರಲಾರದು. ಕದಂಬ ಕುಲಕ್ಕೆ ಸೇರಿದ ಅರಸರು ಔತ್ತರೇಯರೆಂಬುದು. ಆದರೆ ಈ ವಾದವು ಪ್ರಥಮವಾಗಿ ಸ್ಥಾಪಿಸಲ್ಪಟ್ಟಿದ್ದು ಕ್ರಿ.ಶ.11ನೇ ಶತಮಾನದಲ್ಲಿ. ಈ ಶತಮಾನದ ನಂತರದ ಶಾಸನಗಳಲ್ಲಿ ಇದರ ಪ್ರತಿಯನ್ನೆ ಕಾಣುವುದರಲ್ಲಿ ಆಶ್ಚರ್ಯವಿಲ್ಲ. ದಕ್ಷಿಣ ಹಿಂದೂಸ್ಥಾನದ ಅರಸರಲ್ಲಿ ತಾವು ಉತ್ತರದ ರಾಜಕುಟುಂಬಗಳಿಗೆ ಸಂಬಂಧಿಸಿದವರೆಂಬ ಒಂದು ತರದ ಭಾವನೆಯನ್ನು ವ್ಯಕ್ತಪಡಿಸುವ ಹವ್ಯಾಸ ಬೆಳೆದಿತ್ತೆಂದು ತಿಳಿಯಬಹುದು.

ಹೇಗೂ ಇರಲಿ, ಬನವಾಸಿಯ ಕದಂಬರು ಆದಿಯಲ್ಲಿ ಬ್ರಾಹ್ಮಣ ಕುಲಕ್ಕೆ ಸೇರಿದವರೆಂಬುದಲ್ಲಿಯೂ ಈ ಕುಟುಂಬವು ಕ್ರಿ.ಶ. ಮೂರನೆಯ ಶತಮಾನದಿಂದ ಬನವಾಸಿಯಲ್ಲಿ ಇದ್ದಿರಬೇಕೆಂಬುದರಲ್ಲಿಯೂ ಹೆಚ್ಚಿನ ಸಂದೇಹ ವಿರಲಾರದು. ಕದಂಬ ಕುಲದ ಮೂಲವು ನಂಬಲಸಾಧ್ಯವಾದ ಕಟ್ಟುಕಥೆಗಳ ಮಂಜಿನಿಂದ ಆವರಿಸಲ್ಪಡಲು ಒಂದು ಕಾರಣವನ್ನು ಇಲ್ಲಿ ನೆನವರಿಸಿಕೊಳ್ಳಬಹುದು. ಬನವಾಸಿಯ ಕದಂಬರ ಆಳ್ವಿಕೆಯು ಕ್ರಿ.ಶ.7ನೆಯ ಶತಮಾನಕ್ಕಂತೂ ಅಂತ್ಯವಾಯಿತು. ರಾಜಕೀಯವಾಗಿ ಪುನಃ ಚೇತರಿಸಿಕೊಂಡು ಕ್ರಿ.ಶ.10ನೇ ಶತಮಾನದಲ್ಲಿ. ಈ ಮೂರು ಶತಮಾನಗಳ ಅವಧಿಯಲ್ಲಿ ಅವರು ಸಂಪೂರ್ಣವಾಗಿ ತಮ್ಮ ಚಾರಿತ್ರಿಕ ಮೂಲದ ಅರಿವನ್ನು ಮರೆತುದರಿಂದ ಅನಂತರ ಪ್ರಾಮುಖ್ಯತೆಗೆ ಬಂದಾಗ ತಮ್ಮ ಮೂಲ ಪುರುಷನು ಈಶ್ವರಪಾರ್ವತಿಯಿಂದ ಉದ್ಭವಿಸಿದವನೆಂದು ಹೇಳಿಕೊಂಡು ಘನತೆಯನ್ನು ಹೆಚ್ಚಿಸಿಕೊಳ್ಳುವಂತಾಯಿತೆಂದು ಹೇಳಬಹುದು. ಅಂತೂ ಉತ್ತರಕನ್ನಡ ಜಿಲ್ಲೆ ಹಾಗೂ ಹೈಗಕ್ಷೇತ್ರದಲ್ಲಿ ಬ್ರಾಹ್ಮಣ್ಯವು ಕ್ರಿ.ಶ. ಮೂರನೆಯ ಶತಮಾನದಲ್ಲಿ ಖಂಡಿತವಾಗಿಯೂ ಇತ್ತೆಂದು ತಿಳಿಯಬಹುದಾಗಿದೆ.

2) ಮಯೂರವರ್ಮನು ಹೈಗ, ತೌಳವ, ಕೇರಳಗಳಲ್ಲಿ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ತರಿಸಿ ಭೂಮಿಯನ್ನು ಅವರಿಗೆ ದಾನ ಮಾಡಿ ಅವರನ್ನು ನೆಲೆಸಿದುದೆಂಬುದೂ, ಚರಿತ್ರೆಗೆ ಅರ್ಹವಾಗಿಲ್ಲ. ಕಾರಣ ವೈಜಯಂತಿ (ಬನವಾಸಿ)ಯ ಕದಂಬರು ಕೇರಳದ ಅಧಿಪತಿಗಳಾಗಿದ್ದ ದಾಖಲೆ ಎಲ್ಲಿಯೂ ಕಂಡುಬರುವುದಿಲ್ಲ.

3) ತುಳುಗ್ರಾಮ ಪದ್ಧತಿಯಲ್ಲಿ ಮಯೂರವರ್ಮನು ಒಂದು ಕಡೆ ಹೇಮಾಂಗದ ಸುಶೀಲೆಯರ ಮಗನೆಂದೂ, ಇನ್ನೊಂದು ಕಡೆ ಬನವಾಸಿಯ ಅರಸನಾದ ಮಣಿವರ್ಮನ ಮಗನೆಂದೂ ಹೇಳಲ್ಪಟ್ಟಿದೆ. ಈ ಮಣಿವರ್ಮನು ಯಾರೆಂದು ಚರಿತ್ರೆಯ ನಿರ್ಧಾರಕ್ಕೆ ಸಿಲುಕದಾಗಿದೆ. ಮಯೂರವರ್ಮನ ಪೂರ್ವಿಕರ ಕುರಿತಾಗಿ ರೈಸ್ ದೊರೆಗಳು 5ಹೆಸರನ್ನು ಕೊಡುತ್ತಾರೆ. ಮುಕ್ಕಣ್ಣ (ತ್ರಿನೇತ್ರ, ಯಾ ತ್ರಿಲೋಚನ) ಮಧುಕೇಶ್ವರ, ಮಲ್ಲಿನಾಥ, ಮೊದಲನೆಯ ಚಂದ್ರವರ್ಮ ಮತ್ತು ಎರಡನೆಯ ಚಂದ್ರವರ್ಮ, ಹೇಮಾಂಗದ, ಸುಶೀಲೆಯರ ಉಲ್ಲೇಖವು ಎಲ್ಲಿಯೂ ಕಂಡುಬರುವುದಿಲ್ಲ.

(ಮುಂದುವರಿಯುವುದು)

## ಯುಗಾದಿ ಬರುತ್ತಿದೆ (ಕವನ)

-ಮಾರ್ಪಳ್ಳಿ ಆರ್.ಮಂಜುನಾಥ, ಶಿವಮೊಗ್ಗ

ಯುಗ ಯುಗಾದಿ ಬರುತ್ತಿದೆ
ಹೊಸ ವರುಷವ ತರುತ್ತಿದೆ.
ಹಳೆಯ ನೆನಪಲಿ ಹೊಸ ಚೇತನವ
ಮರಳಿ ಮರಳಿ ತರುತ್ತಿದೆ.

ಬೇವು ಬೆಲ್ಲದ ರುಚಿಯ ಸಂಗಮ
ಜೀವನರ್ಥವ ಕಲಿಸಿದೆ.
ಸುಖದುಃಖವ ಹಂಚಿಕೊಂಡು
ಸಮಬಾಳ್ವೆ ನಡೆಸು ಎಂದಿದೆ.

ಕಷ್ಟವಿರಲಿ, ಸುಖವಿರಲಿ
ಸಮಚಿತ್ತವ ಕಾಪಾಡು ಎಂದಿದೆ.
ಬದುಕು ಒಂದು ನವೀನವೆಂಬ
ಸತ್ಯದರ್ಶನ ಮಾಡಿದೆ.

ಹೊಸ ವರುಷ ಹೊಸತನವ
ನಡೆಸು ಬಾಳು ಎಂದಿದೆ.
ಹಳೆಯ ಕಹಿಯ ಮರೆತು ಬದುಕು
ಹೊಸದಿನವ ಕಾದಿದೆ.

ದ್ವೇಷ ಅಸೂಯೆಯ ಮರೆತು ನಾವು
ಹೊಸ ಹೆಜ್ಜೆಯ ಇರಿಸುವ.
ಹೊಸ ವರುಷದಲಿ ಹೊಸ ಹರುಷದಲಿ
ಯುಗಾದಿ ಹಬ್ಬವ ನಡೆಸುವ.

**ಬಾಲಪ್ರತಿಭೆ ಕವನ** ಶಮಾತ್ಮಿಕ ರಾವ್,
5ನೇ ತರಗತಿ, ವಿದ್ಯೋದಯ ಶಾಲೆ, ಉಡುಪಿ

## ತ್ಯಾಗ

ಬೆಳಗುವ ಒಂದು ದೀಪ
ಬೆಳಗಿಸುವುದು ಒಂದು ಮನೆ,
ಚಂದದಿ ನೀಡುತ್ತಾ ಬೆಳಕು
ತನ್ನ ಪ್ರಾಣವ ಲೆಕ್ಕಿಸದೆ.

ಅದು ನೀಡುವುದು ಪ್ರಕಾಶ
ತನ್ನ ಪ್ರಾಣವ ಲೆಕ್ಕಿಸದೆ,
ತಾನು ಕರಗಿ ಹೋದರೂ ಹೇಳುವುದು
ಪರರ ಸುಖ ತನ್ನ ಸುಖವೆಂದು.

ಇಂತಹ ಒಂದು ಗುಣವು
ಮನುಷ್ಯನಲ್ಲಿ ಇರುವುದೆಂದು
ಇಡೀ ಜಗ ಹುಡುಕಿತಂತೆ
ಆದರೆ ಎಲ್ಲಿ ಅಂತ ಗೊತ್ತಿಲ್ಲವಂತೆ.

ಕೆಲವರು ಅದನ್ನು ಬಲ್ಲರು
ಎಲ್ಲಿ ಇರುವುದು ಅಂತೆ,
ಹೇಳಿದರು ಅವರು ಅದು
ಮನುಷ್ಯನ ಮನದಲ್ಲಿ ಇರುವುದಂತೆ!

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ

ಆತ್ಮೀಯರೇ



ಶ್ರೀಶಾರದಾ ಮಂಟಪವನ್ನು ವಿಸ್ತರಿಸಿ ಗಾಳಿ ಬೆಳಕು ಚೆನ್ನಾಗಿ ಬರುವಂತೆ ಮಾಡಲಾಗಿದ್ದು ಮಂಟಪದಲ್ಲಿರುವ ವಧೂವರರ ಕೊಠಡಿಗಳಲ್ಲಿ ಶೌಚಾಲಯ ಜೋಡಣೆ, ವೇದಿಕೆ ನವೀಕರಣ, ಸಭಾಂಗಣದ ಎದುರು ವಿಶಾಲವಾದ ಬಾಗಿಲಿನ ಜೋಡಣೆ, ಶ್ರೀಶಾರದಾ ದೇವಸ್ಥಾನದ ನವೀಕರಣ, ರತ್ನಸ್ಮೃತಿ-ಜ್ಞಾನಮಂದಿರ ನವೀಕರಣ, ಶ್ರೀಶಾರದಾ ದೇವಸ್ಥಾನಕ್ಕೆ ಸ್ವಾಗತ ಗೋಪುರ ನಿರ್ಮಾಣ, ಅಂಗಣಕ್ಕೆ ಇಂಟರ್‌ಲಾಕ್ ಅಳವಡಿಸುವುದು, ಶ್ರೀಶಾರದಾ ಮಂಟಪದ ಮೊದಲ ಅಂತಸ್ತಿನ ವಿಸ್ತರಣೆ - ಈ ಎಲ್ಲಾ ಯೋಜನೆಗಳು ಕಾರ್ಯಗತವಾಗಿದ್ದು ನಮ್ಮ ಉಡುಪಿಯ ಶಾರದಾ ಮಂಟಪವು ಎಲ್ಲರಿಂದ ಪ್ರಶಂಸೆಗೆ ಪಾತ್ರವಾಗಿದೆ.

**ಇನ್ನೀಗ ಹೊಸ ಜನರೇಟರ್ ಅಳವಡಿಕೆ ಹಾಗೂ ಮಂಟಪದಲ್ಲಿ ಫಾಲ್ ಸೀಲಿಂಗ್ ಮತ್ತು ಫ್ಲೋರಿಂಗ್ ಅಳವಡಿಸಲು ನಿರ್ಧರಿಸಿದ್ದೇವೆ.**

ಈ ಹಿಂದೆ ನಮಗೆ ನೀಡಿದ ಸಹಕಾರವನ್ನು ಸ್ಮರಿಸುತ್ತಾ ಸಹೃದಯ ಸಮಾಜ ಬಾಂಧವರಿಂದ ಉದಾರ ಧನ ಸಹಾಯವನ್ನು ನಿರೀಕ್ಷಿಸುತ್ತಿದ್ದೇವೆ. ನಿರ್ಮಾಣ ಕಾರ್ಯಕ್ಕೆ ದೇಣಿಗೆ ನೀಡುವವರು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಹೆಸರಿನಲ್ಲಿ ಚೆಕ್, ಡ್ರಾಫ್ಟ್ ಅಥವಾ ನಗದು ರೂಪದಲ್ಲಿ ದೇಣಿಗೆ ನೀಡಲು ವಿನಂತಿಸುತ್ತಿದ್ದೇವೆ. - **ಕಾರ್ಯದರ್ಶಿ,** ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ಎಚ್. ದೇವಾನಂದ್ ಭಟ್ Cell :9845644556
ಶೋಭಾ ಡಿಜಿಟಲ್
ಸ್ಟುಡಿಯೋ ವೀಡಿಯೊ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ
ಬೆಳ್ವಾಯಿ-574213
(08258)-276177 (O), (918258)-324133 (O), 276777 (R)
ಎಡಪದವು - 574 164 (0824)-256374 (O) ಮಂಗಳೂರು, ದ.ಕ.

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ


## ಮಾಂಗಲ್ಯಂ ತಂತುನಾನೇನ ....

ಬೆಂಗಳೂರಿನಲ್ಲಿ ವಾಸ್ತವ್ಯವಿರುವ ಮೋಹನ್ ರಾವ್ ಹಾಗೂ ಶ್ರೀಮತಿ ಜಯಲಕ್ಷ್ಮೀಯವರ ಪುತ್ರಿ **ಚೈತ್ರ** ಮತ್ತು ಶ್ರೀಮತಿ ಭಾರತಿ ಹಾಗೂ ಶ್ರೀ ಪದ್ಮನಾಭರವರ ಪುತ್ರ **ಅನಿಲ್‌ಕುಮಾರ್** ಇವರ ವಿವಾಹವು ತಾ.02-04-2010ರಂದು ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

ಕಟೀಲು ಸಿತ್ಲ ಭಾಸ್ಕರರಾಯರ ಪುತ್ರ **ರಂಗನಾಥ** ಹಾಗೂ ಹೆಗ್ಗುಂಜೆ ಗ್ರಾಮದ ಕಲ್ಲು ದೇವಸ್ಥಾನದ ಶಂಭುಶಂಕರರಾಯರ ಪುತ್ರಿ **ವಿನುತ** ಇವರ ವಿವಾಹವು ತಾ.09-04-2010ರಂದು ಶ್ರೀ ಮಂದಾರ್ತಿ ದುರ್ಗಾಪರಮೇಶ್ವರಿ ಅಮ್ಮನವರ ಅನ್ನಛತ್ರದ ಸಭಾಂಗಣದಲ್ಲಿ ನೆರವೇರಿತು.

★★★★

ಕುಂದಾಪುರ ತಾಲೂಕು ಬೆಳ್ವೆ ಗ್ರಾಮ ಅಬ್ಲಿಕಟ್ಟೆ ಶ್ರೀಮತಿ ನಾಗರತ್ನ ಮತ್ತು ಶ್ರೀಯುತ ಗೋಪಾಲಕೃಷ್ಣ ಹೆಬ್ಬಾರ್‌ರವರ ಸುಪುತ್ರಿ **ಆಶಾ** ಹಾಗೂ ಶಿವಮೊಗ್ಗ ವಾಸಿ ಶ್ರೀಮತಿ ವಾಗೀಶ್ವರಿ ಮತ್ತು ಶ್ರೀಯುತ ಚಂದ್ರಶೇಖರ ರಾವ್‌ರವರ ಸುಪುತ್ರ **ಶ್ಯಾಮಸುಂದರ** ಇವರ ವಿವಾಹವು ತಾ.09-04-2010ರಂದು ಕುಂದಾಪುರ ಹಂಗಳೂರು ಅನಂತಪದ್ಮನಾಭ ಸಭಾಗೃಹದಲ್ಲಿ ನೆರವೇರಿತು.

★★★★

ಶ್ರೀಮತಿ ಚಂದ್ರಕಲಾ ಮತ್ತು ಪಿ. ಸರ್ವಜ್ಞರಾಯರ ಪುತ್ರ **ಸಂದೀಪ್** ಹಾಗೂ ಶ್ರೀಮತಿ ಪ್ರಭಾ ಮತ್ತು ಶ್ರೀ ಎಮ್. ಎಸ್. ಶಿವರಾವ್ ಅವರ ಪುತ್ರಿ **ಪ್ರಜ್ಞಾ** ಇವರ ವಿವಾಹವು ತಾ.01-04-2010ರಂದು ಸುಳ್ಯ ಪರಿವಾರ ಕಾನದಲ್ಲಿರುವ ಅಮರಶ್ರೀ ಹಾಲ್‌ನಲ್ಲಿ ನೆರವೇರಿತು.

★★★★

ಶ್ರೀ ಪದ್ಮನಾಭ ಹೆಬ್ಬಾರ್ ಮತ್ತು ದಿ। ಶ್ರೀಮತಿ ಸರ್ವಮಂಗಳಾರವರ ಪುತ್ರ **ದೀಪಕ್** ಹಾಗೂ ಶ್ರೀಮತಿ ಚಂದ್ರಿಕಾ ಮತ್ತು ಶ್ರೀ ಶಂಕರ ನಾರಾಯಣ ಹೆಬ್ಬಾರರ ಪುತ್ರಿ **ಸ್ವಾತಿ** ಇವರ ವಿವಾಹವು ತಾ.18-03-2010ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಶುಭ ಜನನ

ದಿ। ಪರಾರಿ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀಮತಿ ಪಾರ್ವತಿ ಇವರ ಪುತ್ರ ಶ್ರೀನಿಧಿ ಹಾಗೂ ಪಾದೆಬೆಟ್ಟು ಶಂಕರರಾವ್ ಮತ್ತು ಶ್ರೀಮತಿ ವಸಂತಿ ರಾವ್ ಇವರ ಪುತ್ರಿ ಆಶಾಲತಾ ದಂಪತಿಗಳಿಗೆ ತಾ.18-3-2010ರಂದು ಬೆಂಗಳೂರಿನಲ್ಲಿ ಗಂಡು ಮಗುವಿನ ಜನನ.

## ದಾಂಪತ್ಯ ಜೀವನದ ರಜತೋತ್ಸವ ಆಚರಣೆ

ಊರ್ವ ಮಾರ್ಕೆಟ್ ಮಂಗಳೂರಿನಲ್ಲಿ ವಾಸ್ತವ್ಯವಿರುವ ಶ್ರೀ ಹೇಮಚಂದ್ರ ರಾವ್ ಮತ್ತು ಶ್ರೀಮತಿ ಶೈಲಜಾ ರಾವ್ ಇವರು ತಮ್ಮ ವೈವಾಹಿಕ ಜೀವನದ 25ನೇ ವರ್ಷದ ಸಮಾರಂಭವನ್ನು ತಾರೀಕು 15-03-2010 ರಂದು ಊರ್ವ ಮಾರ್ಕೆಟ್‌ನಲ್ಲಿರುವ ಅವರ ಸ್ವಗೃಹ ರಾಮನಿಲಯದಲ್ಲಿ ಬಂಧು-ಮಿತ್ರರೊಡಗೂಡಿ ಆಚರಿಸಿದರು.

## ಮೇಷ ಮಾಸ ವಿಶೇಷ ದಿನಗಳು

| | |
|---|---|
| 14-04-2010 | ಮೇಷ ಸಂಕ್ರಮಣ<br>ಅಮಾವಾಸ್ಯ<br>ಸೌರಮಾನ ಯುಗಾದಿ |
| 25-04-2010 | ಸರ್ವೈಕಾದಶೀ |
| 26-04-2010 | ಪ್ರದೋಷಃ, |
| 27-04-2010 | ಮಳೆ ನಕ್ಷತ್ರ ಭರಣಿ ಪ್ರಾರಂಭ |
| 28-04-2010 | ಪೂರ್ಣಿಮಾ |
| 01-05-2010 | ಸಂಕಷ್ಟ ಚತುರ್ಥಿ<br>ಚಂದ್ರೋದಯ ರಾತ್ರಿ ಗಂ.9.34ಕ್ಕೆ |
| 09-05-2010 | ಸ್ಮಾರ್ತೈಕಾದಶೀ |
| 10-05-2010 | ಭಾಗವತೈಕಾದಶೀ |
| 11-05-2010 | ಪ್ರದೋಷಃ<br>ಮಳೆನಕ್ಷತ್ರ ಕೃತ್ತಿಕಾ ಆರಂಭ |
| 14-05-2010 | ವೃಷಭ ಸಂಕ್ರಮಣ<br>ಅಮಾವಾಸ್ಯ |

## ಗೃಹಪ್ರವೇಶ

ಉಡುಪಿ ಅಂಬಲಪಾಡಿಯ ಶ್ರೀಮತಿ ಮತ್ತು ಶ್ರೀ ರಂಗಯ್ಯ ಹೆಬ್ಬಾರ್‌ರವರ ಪುತ್ರ ಗಣೇಶ ಹೆಬ್ಬಾರ್ ಮತ್ತು ಶ್ರೀಮತಿ ಆರತಿ ಇವರು ಅಂಬಲಪಾಡಿ ಕುಂಜಗುಡ್ಡೆಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ "ಕುಟೀರ"ದ ಪ್ರವೇಶೋತ್ಸವವನ್ನು ತಾ.5-4-2010ರಂದು ನೆರವೇರಿಸಿದರು.

★★★★

ಶ್ರೀ ಬಿ. ಸದಾಶಿವ ರಾವ್ ಬೆಳ್ಳೆ (ಬೆಳ್ಳೆ ದೇವರಾಯರ ಪುತ್ರ) ಹಾಗೂ ಶ್ರೀಮತಿ ಸಹನಾ ಎನ್.ಬೆಳ್ಳೆ ದಂಪತಿಗಳು ಮಂದಾರ್ತಿಯ ಜಾನುವಾರುಕಟ್ಟೆಯಲ್ಲಿ ನಿರ್ಮಿಸಿದ ನೂತನ ಗೃಹ 'ವೇದ ವಿಧಿ'ಯ ಪ್ರವೇಶೋತ್ಸವವನ್ನು ತಾ.9-4-2010ರಂದು ಬಂಧುಬಾಂಧವರೊಡಗೂಡಿ ನೆರವೇರಿಸಿದರು.

★★★★

ಶ್ರೀಮತಿ ಲಲಿತ ಮತ್ತು ಸುಬ್ರಾಯ ಶ್ಯಾನುಭೋಗ ದಂಪತಿಗಳು ಕುಂದಾಪುರ ತಾಲೂಕು ಕೋಟೇಶ್ವರ ಸಮೀಪದ ಬೀಜಾಡಿ ಗ್ರಾಮ ಅರಸರಬೆಟ್ಟಿನಲ್ಲಿ ನಿರ್ಮಿಸಿದ ನೂತನ ಗೃಹ 'ಸ್ಮೃತಿ' ಇದರ ಪ್ರವೇಶೋತ್ಸವವನ್ನು ತಾ.1-4-2010ರಂದು ನೆರವೇರಿಸಿದರು.

ಶ್ರೀಮತಿ ಮತ್ತು ಶ್ರೀ ಸುಬ್ರಾಯ ಹೆಬ್ಬಾರ್‌ರವರು ಹಟ್ಟಿಯಂಗಡಿ ರಥಬೀದಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ 'ಮಾತಾಶ್ರೀ' ಇದರ ಪ್ರವೇಶೋತ್ಸವವನ್ನು ತಾ.1-4-2010 ರಂದು ನೆರವೇರಿಸಿದರು.

★★★★

ಶ್ರೀಮತಿ ಸವಿತಾ ಮತ್ತು ಪ್ರೊಫೆಸರ್ ಟಿ. ನಾರಾಯಣ ಶ್ಯಾನುಭಾಗ್ ಇವರು ದೊಡ್ಡಣಗುಡ್ಡೆ ರೈಲ್ವೇ ಬ್ರಿಡ್ಜ್ ಬಳಿ ನೂತನವಾಗಿ ನಿರ್ಮಿಸಿದ ಗೃಹ 'ಶ್ರೀಸವಿತ'ದ ಪ್ರವೇಶೋತ್ಸವವನ್ನು ತಾ.1-4-2010 ರಂದು ನೆರವೇರಿಸಿದರು. ಆ ಪ್ರಯುಕ್ತ ತಾ.31-3-2010ರಂದು ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಕುಂಜಿಬೆಟ್ಟು ಇವರಿಂದ 'ಜಾಂಬವತಿ ಕಲ್ಯಾಣ' ಯಕ್ಷಗಾನ ಬಯಲಾಟವು ನಡೆಯಿತು.

★★★★

ಶ್ರೀಮತಿ ಚೇತನ ಮತ್ತು ಶ್ರೀ ಶ್ರೀನಿವಾಸ ಶರ್ಮ ಪಾದೆಬೆಟ್ಟು ಇವರು ನೂತನವಾಗಿ ನಿರ್ಮಿಸಿದ ಗೃಹ 'ಲಕ್ಷ್ಮೀರಾಮ ನಿಲಯ' ಇದರ ಪ್ರವೇಶೋತ್ಸವವನ್ನು ತಾ.8-4-2010 ರಂದು ನೆರವೇರಿಸಿದರು. ಅದೇ ದಿನ ಬೆಳಿಗ್ಗೆ ತಮ್ಮ ಪುತ್ರ ವಿಷ್ಣು ಪ್ರಸಾದ್‌ನಿಗೆ ಬ್ರಹ್ಮೋಪದೇಶವನ್ನು ನೆರವೇರಿಸಿದರು.

**ವಿಳಾಸ ಬದಲಾವಣೆ :** A. RAMAKRISHNA RAO,
"Kanmani", Achutha Rao Layout, 5th Cross, SHIMOGA -577 201.

## ಅಭಿನಂದನೆ



**ಡಾ। ಸ್ಮಿತಾ ಎನ್. ರಾವ್**

ಡಾ। ಸ್ಮಿತಾ ಎನ್. ರಾವ್ ಅವರು ತಾ.14 ಮತ್ತು 15 ನವಂಬರ್ 2009ರಂದು ನಡೆದ ರಾಜ್ಯ ಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಸ್ಪರ್ಧೆಯಲ್ಲಿ 50 ಮೀಟರ್ ಬ್ರೆಸ್ಟ್ ಸ್ಟ್ರೋಕ್, 100 ಮೀಟರ್ ಬ್ರೆಸ್ಟ್ ಸ್ಟ್ರೋಕ್, 50 ಮೀಟರ್ ಫ್ರಿ-ಸ್ಟೈಲ್ ವಿಭಾಗದಲ್ಲಿ ಚಿನ್ನದ ಪದಕವನ್ನು ಗಳಿಸಿರುತ್ತಾರೆ.

ತಾ.26 ಮತ್ತು ತಾ.27 ಫೆಬ್ರವರಿ 2010ರಂದು ಗುಜರಾತಿನ ರಾಜಕೋಟ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಸ್ಪರ್ಧೆಯಲ್ಲಿ ಇವರು 50 ಮೀಟರ್ ಫ್ರಿ-ಸ್ಟೈಲ್ ರಿಲೆ, 50 ಮೀಟರ್ ಮೆಡ್ಲೆ ರಿಲೆಯಲ್ಲಿ ಬೆಳ್ಳಿಯ ಪದಕ ಮತ್ತು 100 ಮೀಟರ್ ಬ್ರೆಸ್ಟ್ ಸ್ಟ್ರೋಕ್ ವಿಭಾಗದಲ್ಲಿ ಕಂಚಿನ ಪದಕವನ್ನು ಗಳಿಸಿರುತ್ತಾರೆ.

ಡಾ। ಸ್ಮಿತಾ ಎನ್. ರಾವ್‌ರವರ ಈ ವಿಶೇಷ ಸಾಧನೆಗೆ ಶ್ರೀಶಾರದಾ ಅಭಿನಂದನೆಯನ್ನು ಸಲ್ಲಿಸುತ್ತದೆ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ : ಹೊಟ್ಟೆಯಲ್ಲಿ ಜಂತುಗಳಾಗುವುದು ಹೇಗೆ? ಇದಕ್ಕೆ ಚಿಕಿತ್ಸೆ ಏನು?**

**ಡಾ। ವೈ. ಸುದರ್ಶನ ರಾವ್**

**ಉತ್ತರ :** ಮನುಷ್ಯನ ಹೊಟ್ಟೆಯಲ್ಲಿ ಎರಡು ವಿಧದ ಜಂತುಹುಳಗಳಾಗಬಹುದು. ಮಾಂಸಾಹಾರ ಸೇವನೆಯಿಂದ ಮಾತ್ರ ಬರಬಹುದಾದ ಟೇಪ್ ವರ್ಮ್ ಎಂಬ ಜಂತು ಒಂದು ಬಗೆಯದ್ದಾದರೆ, ಕಲುಶಿತ ನೀರು ಹಾಗೂ ಆಹಾರ ಸೇವನೆಯಿಂದ ಬರುವ ಹುಳಗಳು ಇನ್ನೊಂದು ಬಗೆಯವು. ಹೊಟ್ಟೆಯಲ್ಲಿ ಹುಳಗಳು ಎಲ್ಲಾ ವಯೋಮಾನದವರಲ್ಲೂ ಆಗಬಹುದು. ತಮ್ಮ ಸ್ವಚ್ಚತೆಯನ್ನು ಸ್ವತಃ ಕಾಪಾಡಿಕೊಳ್ಳಲಾಗದವರಲ್ಲಿ, ಮಕ್ಕಳಲ್ಲಿ, ವೃದ್ಧರಲ್ಲಿ ಇದು ತುಂಬಾ ಸಾಮಾನ್ಯವಾದ ಕಾಯಿಲೆ. ಹೊಟ್ಟೆಯಲ್ಲಿ ಹುಳಗಳಾಗುವುದು ಹೇಗೆಂದು ಅರ್ಥ ಮಾಡಿಕೊಂಡರೆ ಈ ಕಾಯಿಲೆಯನ್ನು ಸುಲಭವಾಗಿ ಬರದಂತೆ ಮಾಡಬಹುದು. ಹೊಟ್ಟೆ ಹುಳದಿಂದ ಹೊಟ್ಟೆನೋವು, ಹೊಟ್ಟೆ ಉಬ್ಬರಿಸುವುದು, ರಕ್ತಹೀನತೆ, ಮಕ್ಕಳ ಬೆಳವಣಿಗೆಯಲ್ಲಿ ಹಿನ್ನಡೆ ಇತ್ಯಾದಿ ಚಿಹ್ನೆಗಳಿರುತ್ತವೆ. ಮಲದಲ್ಲಿ ಹುಳಗಳಿದ್ದರೆ ಹೊಟ್ಟೆಯಲ್ಲಿ ತುಂಬಾ ಹುಳಗಳಿವೆ ಎಂದು ಅರ್ಥ. ಸುಮಾರು ಜನರಲ್ಲಿ ಹೊಟ್ಟೆಯಲ್ಲಿ ಹುಳಗಳಿದ್ದರೂ ಯಾವುದೇ ಚಿಹ್ನೆಗಳಿರುವುದಿಲ್ಲ.

ಸೂಜಿ ಮೊನೆ ಗಾತ್ರದ ಹುಳದ ಮರಿಯೊಂದು ನಮ್ಮ ದೇಹದೊಳಗೆ ಪ್ರವೇಶಿಸಿ, ಬೆಳೆದು, ಸಂತಾನಾಭಿವೃದ್ಧಿ ಮಾಡುವ ಅದರ ಜೀವನಚಕ್ರವನ್ನು ಕೇಳಿದರೆ ಸೋಜಿಗವೆನ್ನಿಸದಿರದು. ಒಬ್ಬ ರೋಗಿಯ ಹೊಟ್ಟೆಯಲ್ಲಿರುವ ಹುಳಗಳು ಇಟ್ಟ ಮೊಟ್ಟೆ ಎಂದೂ ಅವನದೇ ಹೊಟ್ಟೆಯಲ್ಲಿ ಮರಿಯಾಗಿ, ದೊಡ್ಡ ಹುಳವಾಗಿ ಬೆಳೆಯುವುದಿಲ್ಲ. ಈ ಮೊಟ್ಟೆಗಳು ಈಗಿರುವ ಜೀವಿಯ ದೇಹದಿಂದ ಹೊರಬಿದ್ದು ಬೇರೆಯೇ ಒಂದು ಕಡೆಯಲ್ಲಿ ಮರಿಯಾಗಿ ಬೆಳೆದ ನಂತರವೇ ನಮ್ಮ ದೇಹ ಪ್ರವೇಶಿಸಿದಲ್ಲಿ ಇನ್ನೊಂದು ಹುಳವಾಗಿ ಬೆಳೆಯಲು ಶಕ್ತವಾಗುವುದು.

ಟೇಪ್‌ವರ್ಮ್ ಎಂಬ ಹುಳವು ಸುಮಾರು ಒಂದು ಮೀಟರ್ ಉದ್ದವಿದ್ದು ಕರುಳಿನಲ್ಲಿ ಸುಮಾರು ಹತ್ತು ವರ್ಷಗಳ ಕಾಲ ರಕ್ತ ಹೀರುತ್ತಾ ಜೀವಿಸುತ್ತದೆ. ರೋಗಿಯ ಮಲದಲ್ಲಿ ಇವುಗಳ ಮೊಟ್ಟೆ ಇರುತ್ತದೆ. ಒಂದು ವೇಳೆ ಬಯಲಿನಲ್ಲಿ ಮಲವಿಸರ್ಜನೆ ಆಗಿದ್ದಲ್ಲಿ ಆ ಮಲವು ಬೀಸಿದ ಗಾಳಿಯಿಂದಾಗಿಯೋ, ಸುರಿದ ಮಳೆಯಿಂದಾಗಿಯೋ ಸುತ್ತಮುತ್ತಲ ಹಲ್ಲುಗಳಲ್ಲಿ ಹರಡಿಕೊಳ್ಳುವುದು. ಆ ಮಲದಲ್ಲಿರುವ ಮೊಟ್ಟೆಗಳು ಉರಿಬಿಸಿಲಿನಲ್ಲಿ ಕೂಡ ಸುಮಾರು ಆರು ವಾರ ಜೀವಂತವಿರಬಲ್ಲವು. ಇಂತಹ ಮಲವನ್ನು ಮೆತ್ತಿಕೊಂಡ ಹುಲ್ಲನ್ನು ಹಸುಗಳು ಅಥವಾ ಈ ಮಲವನ್ನೇ ಹಂದಿಗಳು ತಿಂದಾಗ ಅದರ ಕರುಳಿನಲ್ಲಿ ಈ ಮೊಟ್ಟೆಗಳು ಒಡೆದು ಮರಿಯು ಹೊರಬರುತ್ತದೆ. ಈ ಮರಿಯು ಕರುಳಿನ ಗೋಡೆಯನ್ನು ಕೊರೆದು ರಕ್ತನಾಳವನ್ನು ಪ್ರವೇಶಿಸಿ ರಕ್ತ ಪರಿಚಲನೆಯ ಮುಖಾಂತರ ಆ ಪ್ರಾಣಿಯ ಮಾಂಸಖಂಡಗಳನ್ನು ಸೇರುತ್ತದೆ. ಅಲ್ಲಿ ಬೆಳೆದು ಕೋಶಕಟ್ಟಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಈ ಮರಿಯು ಸುಮಾರು ವರ್ಷಗಳ ಕಾಲ ಬದುಕಿದ್ದು ಮನುಷ್ಯನೊಬ್ಬನ ಹೊಟ್ಟೆಯನ್ನು ಸೇರುವುದನ್ನೇ ಕಾಯುತ್ತಿರುತ್ತದೆ. ಇಂತಹ ಮಾಂಸವನ್ನು ಮನುಷ್ಯನು ಸೇವಿಸಿದಾಗ ಅವನ ಕರುಳಿನಲ್ಲಿ ಈ ಮರಿಗಳು ಕೋಶವೊಡೆದು ಹೊರಬಂದು ಕರುಳಿನಲ್ಲಿ ಜಂತುವಾಗಿ ಬೆಳೆಯುವುದು.

ಕೊಕ್ಕೆ ಹುಳ, ದುಂಡುಹುಳ, ಪಿನ್‌ವರ್ಮ್ ಹಾಗೂ ವಿಪ್ ವರ್ಮ್ ಎಂಬ ನಾಲ್ಕು ಬಗೆಯ ಹುಳಗಳು ಮಾಮೂಲಿಯಾಗಿ ಕಂಡುಬರುತ್ತವೆ. ಈ ನಾಲ್ಕು ಬಗೆಯ ಹುಳಗಳ ಮೊಟ್ಟೆಯು ರೋಗಿಯ ಮಲದಲ್ಲಿ ವಿಸರ್ಜಿಸಲ್ಪಟ್ಟ ಮೇಲೆ ಆರು ವಾರಗಳ ಕಾಲ ಮಣ್ಣಿನಲ್ಲೇ ಬೆಳೆದು ಸಣ್ಣ ಮರಿಯಾಗುವುದು. ಇನ್ನು ಈ ಮರಿಗಳು ಯಾವುದಾದರೊಂದು ವಿಧದಲ್ಲಿ ಮನುಷ್ಯನ ಕರುಳನ್ನು ಸೇರಿಕೊಂಡರೆ ಮಾತ್ರ ಬೆಳೆದು ಹುಳವಾಗಬಲ್ಲವು. ಕೊಕ್ಕೆ ಹುಳದ ಮರಿಯಾದರೆ ನೇರವಾಗಿ ಮನುಷ್ಯನ ದೇಹವನ್ನು ಕಾಲಿನ ಚರ್ಮವನ್ನು ಚುಚ್ಚಿ ಪ್ರವೇಶಿಸುತ್ತದೆ. ನಂತರ ರಕ್ತ ಪರಿಚಲನೆಯನ್ನು ಸೇರಿ ಹೃದಯ, ಶ್ವಾಸಕೋಶಗಳನ್ನೆಲ್ಲಾ ಸುತ್ತಾಡಿ ಕರುಳಿಗೆ ಬಂದು ಹುಳವಾಗಿ ಬೆಳೆಯುತ್ತದೆ. ಆದರೆ ದುಂಡು ಹುಳದ ಮರಿಯು ಆಹಾರ ಮತ್ತು ನೀರಿನ ಮುಖಾಂತರ ಹೊಟ್ಟೆಗೆ ಹೋಗುತ್ತದೆ. ವಿಚಿತ್ರವೆಂದರೆ ಅದು ಅಲ್ಲಿ ಕೂಡಲೇ ಹುಳವಾಗಿ ಬೆಳೆಯದೆ ಕರುಳಿನ ಗೋಡೆಯನ್ನು ಕೊರೆದು ರಕ್ತ ಪರಿಚಲನೆಯನ್ನು ಸೇರಿ ಮೊದಲು ಹೃದಯ, ಶ್ವಾಸಕೋಶಗಳನ್ನೆಲ್ಲ ಸುತ್ತಾಡಿ ನಂತರ ಕರುಳಿಗೆ ವಾಪಸು ಬಂದು ದೊಡ್ಡ ಹುಳವಾಗಿ ಬೆಳೆಯುತ್ತದೆ. ಪಿನ್ ಹಾಗೂ ವಿಪ್ ವರ್ಮ್‌ನ ಮರಿಗಳು ನೇರವಾಗಿ ಆಹಾರ ಅಥವಾ ನೀರಿನ ಮುಖಾಂತರ ಕರುಳನ್ನು ಸೇರಿ ಎಲ್ಲೂ ಸುತ್ತಾಡಲು ಹೋಗದೆ ಅಲ್ಲೆ ಹುಳವಾಗಿ ಬೆಳೆಯುತ್ತದೆ.

ಆಧುನಿಕ ಪದ್ಧತಿಯ ಶೌಚಾಲಯಗಳನ್ನೇ ಎಲ್ಲರೂ ಬಳಸಿದರೆ ಮಲದಲ್ಲಿರುವ ಹುಳದ ಮೊಟ್ಟೆಯು ನಾನಾ ವಿಧಗಳಿಂದ ನಮ್ಮ ಹೊಟ್ಟೆಯನ್ನು ಸೇರುವುದನ್ನು ತಡೆಗಟ್ಟಬಹುದು. ಇದು ಸಾಧ್ಯವಾದಲ್ಲಿ ಹುಳದ ತೊಂದರೆಯನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸಲು ಸಾಧ್ಯವಿದೆ. ಆದರೆ ಇದು ಸದ್ಯಕ್ಕೆ ನಮ್ಮ ದೇಶದಲ್ಲಿ ಕನಸೇ ಸರಿ. ಅಲ್ಲಿಯ ತನಕ ಹುಳದ ಬಗ್ಗೆ ಕಾಳಜಿಯುಳ್ಳವರು ಈ ಬಾಧೆಯಿಂದ ದೂರವಿರಬೇಕಾದರೆ ಈ ಕೆಳಗಿನ ಸೂಚನೆಗಳನ್ನು ಪಾಲಿಸಬಹುದು.

- ಕಶ್ಮಲ ಮಿಶ್ರಿತ ನೀರು ನಾವು ಕುಡಿಯುವ ನೀರಿನ ಮೂಲಗಳಿಗೆ ಸಂಪರ್ಕ ಬರದಂತೆ ಎಚ್ಚರವಹಿಸುವುದು. ಉದಾಹರಣೆಗೆ ಮಳೆಗಾಲದಲ್ಲಿ ತೋಟದ ನೀರು ಬಾವಿಗೆ ಇಳಿಯದಂತೆ ಭದ್ರವಾದ ತಡೆಗೋಡೆಕಟ್ಟುವುದು.

ಕುದಿಸಿದ ಅಥವಾ ಆಧುನಿಕ ಕ್ರಮಗಳ ಮುಖಾಂತರ ಶುದ್ಧೀಕರಿಸಿದ ನೀರನ್ನೇ ಬಳಸುವುದು.

ಆಹಾರ ಪದಾರ್ಥಗಳನ್ನು ಬಳಸುವ ಮುಂಚೆ ನೀರಿನಲ್ಲಿ ಚೆನ್ನಾಗಿ ತೊಳೆದಿರಬೇಕು.

ಬರಿಗಾಲಿನಲ್ಲಿ ನಡೆಯಬಾರದು.

ಊಟದ ಮುಂಚೆ ಹಾಗೂ ಶೌಚದ ನಂತರ ಸಾಬೂನು ಬಳಸಿ ಕೈತೊಳೆಯಬೇಕು. ಉಗುರುಗಳ ನೈರ್ಮಲ್ಯದ ಬಗ್ಗೆ ಗಮನವಿರಲಿ. ಹುಳದ ಮೊಟ್ಟೆಗಳಿಗೆ ಉಗುರಿನ ಸಂದಿಯು ಪ್ರಶಸ್ತವಾದ ವಾಸಸ್ಥಾನ.

ಒಂದುವೇಳೆ ಜಂತು ಬಾಧೆ ತಗಲಿದ್ದೇ ಆದರೂ, ಯಾವುದೇ ಅಡ್ಡಪರಿಣಾಮಗಳಿಲ್ಲದ ಆಧುನಿಕ ಔಷಧಿಯನ್ನು ಸೇವಿಸಿ ಸಂಪೂರ್ಣವಾಗಿ ಗುಣಪಡಿಸಿಕೊಳ್ಳಬಹುದು. ಈ ಔಷಧಿಯನ್ನು ಹುಳದ ಬಾಧೆಯಿಲ್ಲದವರೂ, ಕಲುಷಿತ ನೀರು ಹಾಗೂ ಆಹಾರ ಸೇವಿಸಿರುವ ಸಂದರ್ಭಗಳನ್ನು ಹೊಂದಿಕೊಂಡು, ಮುಂಜಾಗ್ರತಾ ಕ್ರಮವಾಗಿ ಆವಾಗಾವಾಗ ವೈದ್ಯರ ಸಲಹೆ ಪಡೆದು ಸೇವಿಸಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ದಾಂಪತ್ಯ ಜೀವನದ ರಜತೋತ್ಸವ ಆಚರಣೆ



ತಾ.6-3-2010ರಂದು ಪಾಂಡೇಶ್ವರದ ತಮ್ಮ ಸ್ವಗೃಹದಲ್ಲಿ ವೈವಾಹಿಕ ಜೀವನದ ರಜತ ಮಹೋತ್ಸವವನ್ನು ಆಚರಿಸಿಕೊಂಡ ಶ್ರೀ ಪಿ.ವಿ.ಕೃಷ್ಣಮೂರ್ತಿ ಮತ್ತು ಶ್ರೀಮತಿ ಕೃಷ್ಣವೇಣಿ ಹಾಗೂ ಶ್ರೀ ಪಿ. ವಿ.ಪುರುಷೋತ್ತಮ ರಾವ್ ಮತ್ತು ಶ್ರೀಮತಿ ಗಂಗಾವತಿ ದಂಪತಿಗಳಿಗೆ ಶುಭ ಕೋರುವ,

**ಶ್ರೀಮತಿ ಅನ್ನಪೂರ್ಣ ಶಾನುಭೋಗ್ ಮತ್ತು**
**ಶ್ರೀ ಕಿರಣ್ ಶ್ಯಾನುಭೋಗ್**
**(ಮಗಳು ಹಾಗೂ ಅಳಿಯ)**

## THE REGISTRATION OF NEWS PAPERS (CENTRAL) RULES 1956

### SCHEDULE

FORM OF DECLARATION

Form 1 (See Rule-3)

I, B. Krishnamoorthy Rao, Ambalpady declare that I am the publisher of the Newspaper entitled "Shree Sharada" to be published at Udupi on behalf of Shree Sthanika Dravida Brahmana Sangha,® and that particulars in respect of the said News Paper given hereunder are true to the best of my knowledge and belief .

| | | | |
|---|---|---|---|
| 1. | Title of the News Paper | : | SHRI SHARADA |
| 2. | Language in which it is to be published | : | KANNADA |
| 3. | Periodicity of this publication | : | a) Monthly<br>b) 15th of every month |
| 4. | Registration No | : | Registered Under No.J/UDP/ 1260/2009-2011 Dated from 01-12-2008 to 30-11-2011.<br>Licenced to Post without Prepayment WPP No. SK/ UDP/01. |
| 5. | Retail selling price of the Newspaper per copy | : | Rs 2-50 |
| 6. | Publisher's Name | : | B. Krishnamoorthy Rao, Ambalpady Secretary, Sri Sthanika Dravida Brahmana Sangha, ® Kunjibettu, Udupi-576102. |
| 7. | Place of Publication | : | Sri Sharada Mantapa, Kunjibettu, Udupi - 576102. |
| 8. | Editor's Name | : | Sri Y.Mohan Rao, Ambalpady |
| | Nationality | : | Indian |
| | Address | : | Sri Sthanika Dravida Brahmana Sangha, ® Kunjibettu, Udupi-576102. |
| 9. | Printer's Name | : | Vishnu Moorthy Thantry |
| | Nationality | | Indian |
| | Address | | Agrahara Offsets, Behind Karnataka Bank, Car Street, Udupi - 576101 |
| 10. | Name of the printing press where the Newspaper is actually printed and the true and precise description of the premises on which the press is installed | : | Agrahara Offsets, Behind Karnataka Bank, Car Street Udupi. |
| 11. | Owner's Name | : | Sri Sthanika Dravida Brahmana Sangha ®, Kunjibettu, Udupi-576102 |
| | a) Individual or Firm | : | Firm |
| | b) Whether the owner owns any Newspaper | : | No |
| 12. | Please state whether the declaration is in respect of | : | a) A Monthly Newspaper |

Date :15-04-2010 Sd/-
Place :UDUPI The Secretary
For Sri Sthanika Dravida Brahmana Sangha (R), Udupi

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | | |
|---|---|---|
| ಮಂಗಳಾರತಿ | : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 8-00 ಗಂಟೆಗೆ |
| ಪ್ರತಿ ಬುಧವಾರ | : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವೇದಿಕೆಯಿಂದ) |
| ಪ್ರತಿ ಶುಕ್ರವಾರ | : | **''ಭಜನೆ''** ಸಂಜೆ 5-00 ಗಂಟೆಯಿಂದ (ಮಹಿಳಾ ವೇದಿಕೆಯಿಂದ) |
| ಪ್ರತಿ ಆದಿತ್ಯವಾರ | : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-00ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.01-05-2010) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.08-05-2010 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

ಶುದ್ಧ ಪಂಚಮಿಯಂದು (ತಾ.19-04-2010) ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವೈದ್ಯಕೀಯ ನೆರವು ವೇದಿಕೆ

**ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾ ನಗರ, ಕುಂಜಿಬೆಟ್ಟು , ಉಡುಪಿ**

**ಶ್ರೀಮತಿ ಮಾಲತಿ ಶಿವರಾವ್, ಕುಂಜಿಬೆಟ್ಟು , ಉಡುಪಿ ಇವರು ರೂ.5,000/-ಗಳನ್ನು ವೈದ್ಯಕೀಯ ನೆರವು ನಿಧಿಗೆ ದೇಣಿಗೆಯಾಗಿ ನೀಡಿದ್ದಾರೆ. ಇವರಿಗೆ ನಮ್ಮ ಸಂಘದ ಹೃತ್ಪೂರ್ವಕ ಕೃತಜ್ಞತೆಗಳು.**

ನೆರವಿನ ಅಗತ್ಯವುಳ್ಳ ನಮ್ಮ ಸಮಾಜ ಬಾಂಧವರು ಅರ್ಜಿ ಕಳುಹಿಸಬೇಕಾದ ವಿಳಾಸ: ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576102.

ವೈದ್ಯಕೀಯ ನೆರವು ವೇದಿಕೆಯ ಮಹದುದ್ದೇಶದ ಯೋಜನೆಯನ್ನು ಯಶಸ್ವಿಯಾಗಿಯೂ, ನಿರಂತರವಾಗಿಯೂ ನಡೆಸುವಂತಾಗಲು ಸಮಾಜ ಬಾಂಧವರು ದೇಣಿಗೆಗಳನ್ನು ''ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಳಿತಾಯ ಖಾತೆ ನಂ.220/2928 ಸಿಂಡಿಕೇಟ್ ಬ್ಯಾಂಕ್, ರಥಬೀದಿ ಬ್ರಾಂಚ್'' ಈ ಹೆಸರಿನಲ್ಲಿ ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಕಾರ್ಯದರ್ಶಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ-576 102 : ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು ಮತ್ತು ಸಂಚಾಲಕರು, ವೈದ್ಯಕೀಯ ನೆರವು ವೇದಿಕೆ**

## ಶ್ರೀ ಜ್ಞಾನಶಕ್ತಿಸುಬ್ರಹ್ಮಣ್ಯ ದೇವಸ್ಥಾನ, ಪಾವಂಜೆ

**ಅಂಚೆ ಹಳೆಯಂಗಡಿ - 574 146.**

ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ

### ವರ್ಷಾವಧಿ ಉತ್ಸವ ಕಾರ್ಯಕ್ರಮವು

ನೆರವೇರಲಿದ್ದು ತಾ.18-04-2009ರಂದು **ಮಹಾರಥೋತ್ಸವ**ವು ನಡೆಯಲಿದೆ. ಬೆಳಿಗ್ಗೆ 10-30ಕ್ಕೆ ರಥಾರೋಹಣವಾಗಿ **ಮಹಾಅನ್ನಸಂತರ್ಪಣೆ** ಹಾಗೂ ಸಂಜೆ ರಥೋತ್ಸವ, ರಂಗಪೂಜೆ, ಬಲಿ, ಶಯನೋತ್ಸವ ಕಾರ್ಯಕ್ರಮಗಳು ನೆರವೇರಲಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತ ಬಾಂಧವರು ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿಯ ಪ್ರಕಟಣೆಯು ತಿಳಿಸಿದೆ.

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org